ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ ೨೦೫(೧)ನೇ ಅನುಚ್ಛೇದದ ಮೇರೆಗೆ ೧೯೮೮-೮೯ನೇ ಸಾಲಿನ ಅನುಪೂರಕ ಅಂದಾಜುಗಳ (ಎರಡನೇ ಕಂತು) ಬಗ್ಗೆ ಪ್ರಸ್ತಾಪಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—೧೯೮೮-೮೯ನೇ ಸಾಲಿನ ಅನುಪೂರಕ ಅಂದಾಜುಗಳ (ಎರಡನೇ ಕಂತು) ಬಗ್ಗೆ ಪ್ರಸ್ತಾಪವನ್ನು ಮಂಡಿಸಲಾಯಿತು.

(ಗೊಂದಲ)

ಅಧ್ಯಕ್ಷರು.—ತಮ್ಮ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.....

(ಗೊಂದಲ)

ಅಧ್ಯಕ್ಷರು.—ಈಗ ಯಾರು ಏನೇ ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನೇಕ ಸಲ ನೀವು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೀರಿ ಈ ಸದನದಲ್ಲಿ ಒಂದು ಸಲ ಅಲ್ಲ, ೧೦ ಸಲ ತಾವು ಹೇಳಿದ್ದೀರಿ, ತಾವು ಅನೇಕ ಸಲ ಅವರಿಗೆ ಸರ್ಕ್ಯುಲರ್ಸ್ ಕಳುಹಿಸಿದ್ದೀರಿ, ಪ್ರತಿಯೊಂದು ಪ್ರಶ್ನೆಗೂ ಉತ್ತರ ಕೊಡಬೇಕೆಂದು ತಾವು ಹಲವಾರು ಬಾರಿ ಹೇಳಿದ್ದೀರಿ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರವನ್ನು ಇವತ್ತು ಮುಂಜಾನೆ ಕೊಡಲಿಲ್ಲ. ಯಾವಾಗ ನಾವೂ ಹಾಗೂ ಕಾನಡೆಯವರು ಇನ್‌ಸಿಸ್ಟ್ ಮಾಡಿದಾಗ ಬೇರೆ ಸದಸ್ಯರುಗಳಿಗೂ ಬೇರೆ ಪಟ್ಟಿಯನ್ನು ಒದಗಿಸಿಕೊಟ್ಟರು. ಈ ಪರಿಸ್ಥಿತಿ ಬಹಳ ಗಂಭೀರವಾದುದು. They are so disobedient. ತಮ್ಮ ಮಾತನ್ನು ಅವರು ಕೇಳುತ್ತಿಲ್ಲ. ತಾವು ಅವರಿಗೆ ಒಂದು ಛೀಮಾರಿ ಹಾಕಿ ಇಂತಹ ಕೆಲಸ ಮಾಡಬೇಡಿ ಎಂದು ಹೇಳಬೇಕು.

ಅಧ್ಯಕ್ಷರು.—ಮಂತ್ರಿಗಳು ಬಯಮಿಟ್ಟ ಉತ್ತರ ಪ್ರತಿಗಳನ್ನು ಕೊಡಬೇಕು. ಈಗ ಎಂ. ಎಸ್. ಕೃಷ್ಣನ್ ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನಮ್ಮ ವಿಧಿ ನಿಯಮಗಳ ಪ್ರಕಾರ ಇವತ್ತು ಸಭೆ ನಡೆಯುತ್ತಿಲ್ಲ. ಇಂತಿಂತಹ ಪ್ರಶ್ನೆಗಳಿಗೆ ಇಂತಿಂತಹ ಮಂತ್ರಿಗಳು ಉತ್ತರ ಕೊಡಬೇಕೆಂದು ನಿಯಮ ಇದೆ. ಆದರೆ ಆ ರೀತಿ ನಡೆಯುತ್ತಿಲ್ಲ, ಇಷ್ಟನೇ ತಾರೀಖಿನ ಒಳಗೆ ಪ್ರಶ್ನೆಯನ್ನು ಕಳುಹಿಸಬೇಕೆಂದೆಲ್ಲಾ ಇದೆ. ನಾವೆಲ್ಲಾ ಆ ನಿಯಮಾವಳಿಯನ್ನು ಪರಿಪಾಲನೆ ಮಾಡಿಕೊಂಡು ಬರುತ್ತಿದ್ದೇವೆ, ಇಂತಿಂತಹ ಮಂತ್ರಿಗಳು ಇಂತಿಂತಹ ತಾರೀಖು ಉತ್ತರ ಕೊಡಬೇಕೆಂದಿರುವುದನ್ನು ಇವರು ಪಾಲಿಸಿ ಮಾಡುತ್ತಿಲ್ಲ. ಒಂದೊಂದು ಸಲ ಉತ್ತರ ಬರುತ್ತದೆ ಆದರೆ ಪೂರ್ತಿ ಉತ್ತರ ಕೊಡುವುದಿಲ್ಲ. ಕೆಲವೊಮ್ಮೆ ಉತ್ತರವೇ ಬರುವುದಿಲ್ಲ. ಮತ್ತೊಬ್ಬರು ನಾಳೆಂದೆ ಕೊಡುತ್ತೇವೆಂದು ಇಲ್ಲವೇ ನಾಳೆ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ನಾಳೆಯೂ ಬರುವುದಿಲ್ಲ ನಾಡಿದ್ದೂ ಬರುವುದಿಲ್ಲ. ಅನೇಕ ಸಲ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಕೇಳಿ ಕೇಳಿ ಸುಸ್ತಾಗಿದ್ದಾರೆ. ಏನು ಮಾಡಿದರೂ ಉತ್ತರ ಬರುವುದಿಲ್ಲ. ತಾವು ಇದರ ಬಗ್ಗೆ ಅನೇಕ ಸಲ ಹೇಳಿದರೂ ಕೂಡ ಇವರು ಗಮನಿಸುತ್ತಿಲ್ಲ. ಲಿಖಿತ ಮೂಲಕ ಉತ್ತರ ಸಭೆಯು ಪಡೆಯಿಡಬೇಕೆಂದಿದ್ದೆ. ಆದರೆ ನಮಗೆ ಉತ್ತರ ಬರುವುದಿಲ್ಲ. ಸಭೆಯ ಮುಂದಿಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ಅದು ನಮಗೇನು ಗೊತ್ತು? ಏನು ಉತ್ತರ ಇಟ್ಟಿದ್ದಾರೆಂಬುದು ಗೊತ್ತಿಲ್ಲ. ಇದು ಸುಮ್ಮನೆ ಔಪಚಾರಿಕವಾಗಿದೆ. ನಮ್ಮ ಮಾತಿಗೆ ಸ್ವಲ್ಪವೂ ಬೆಲೆ ಕೊಡುತ್ತಿಲ್ಲ, ಯಾರ ಮಾತಿಗೂ ಬೆಲೆ ಕೊಡುತ್ತಿಲ್ಲ. ಅವರು ಮನಬಂದಂತೆ ಕಟ್ಟಿಕೊಂಡು ಹೊರಟರೆ ಒಳ್ಳೆಯದು. ಅವರನ್ನು ಹದ್ದುಬಸ್ತಿಗೆ ತನ್ನಿ ನಾವು ಇಲ್ಲದಿದ್ದರೇ ನಿಮಗೆ ಛೀಮಾರಿ ಹಾಕಬೇಕಾಗುತ್ತದೆ.....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಿಯಮ ೩೫೪ ಕ್ಕೂ ಸಹ ನಮಗೆ ಉತ್ತರ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಕೃಷ್ಣನ್ ಅವರು ನಿಯಮಾವಳಿ ಏನಿದೆ ಏಂಬುದನ್ನು ಹೇಳಿದ್ದಾರೆ. ನಿಯಮಾವಳಿಯ ಪ್ರಕಾರ ಒಂದು ವಿಚಾರವನ್ನು ಸದನದಲ್ಲಿ ಮಂಡಿಸಿದರೆ ಅದರ ಪ್ರತಿ

ನಮಗೆ ಕೂಡಲೇ ಬರಬೇಕು. ಅದು ನಿಯಮಾವಳಿಯ ಪ್ರಕಾರ ಅವರ ಆದ್ಯ ಕರ್ತವ್ಯವಾಗಿದೆ. ಆದರೆ ಈ ಕರ್ತವ್ಯವನ್ನು ಅವರು ನಿರ್ವಹಿಸುತ್ತಿಲ್ಲ. ಇಲ್ಲಿ ಏನು ನಡೆಯುತ್ತಿದೆ, ಏನಾಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರದ ಹತ್ತಿರ ಪೇಪರ್ ಇಲ್ಲವೇ ? ಸರ್ಕಾರದ ಹತ್ತಿರ ನೌಕರರು ಇಲ್ಲವೇ ? ಕೆಲಸ ಮಾಡುವುದಕ್ಕೆ ಸರ್ಕಾರದ ನೌಕರರಿಗೆ ಸಂಬಳ ಕೊಡುವುದಿಲ್ಲವೇ ? ಸರ್ಕಾರದಲ್ಲಿ ಪೇಪರ್ ಇಲ್ಲವೇ ? ಸ್ಟೇಷನರಿ ಪೇಪರ್ ಇಲ್ಲವೇ ? ಸರ್ಕಾರ ಏನಾದರೂ ದಿವಾಳಿಯಾಗಿದೆಯೇ ? ಅದನ್ನಾದರೂ ಹೇಳಿ. ಅದಾದರೂ ರಾಜ್ಯದ ಜನತೆಗೆ ಗೊತ್ತಾಗಲಿ. ಉತ್ತರ ನಮಗೆ ಸಕಾಲದಲ್ಲಿ ಬರದಿದ್ದರೆ ಹೇಗೆ ? ೬ ತಿಂಗಳು ೭ ತಿಂಗಳು ಅಥವಾ ವರ್ಷ ಆದ ಮೇಲೆ ಉತ್ತರ ಕಳುಹಿಸಿದರೆ ಆದನ್ನು ಬುಟ್ಟಿಗೆ ಹಾಕಬೇಕಾ; ಸರ್ಕಾರಕ್ಕೆ ಏನಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈ ರಾಜ್ಯದಲ್ಲಿ ಏನಾಗುತ್ತಿದೆ, ಏನು ನಡೆಯುತ್ತಿದೆ ಅದನ್ನು ತಿಳಿದು ಕೊಳ್ಳಬೇಕಾದುದು ನಮ್ಮ ಕರ್ತವ್ಯ. ಇದನ್ನು ನಿರ್ವಹಿಸುವುದಕ್ಕೋಸ್ಕರ ಇಲ್ಲಿಗೆ ಬಂದಿದ್ದೇನೆ, ನೀವು ಕೊಟ್ಟಿದ್ದನ್ನು ಅಪ್ಪನ್ನೇ ತೆಗೆದ ಕೊಂಡು ಸಮಾಧಾನಪಟ್ಟು ಕೊಳ್ಳುವುದಕ್ಕೆ ನಾವು ಇಲ್ಲಿ ಬಂದಿಲ್ಲ. ಇಲ್ಲಿ ಏನಾಗಿದೆ, ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಬಂದಿದ್ದೇವೆ.

ಶ್ರೀ ಎಂ. ಎಸ್. ನಾರಾಯಣರಾವ್ —ಮಾನ್ಯ ಅಧ್ಯಕ್ಷರೇ, ಈ ದಿವಸದ ರಿಟರ್ನ್ಸ್ ಆನ್ಸರ್ಸ್‌ಅನ್ನು ಟೇಬಲ್ ಮೇಲೆ ಇಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಇನ್ನೂ ಉತ್ತರಗಳೂ ಸಹ ಬಂದಿಲ್ಲ. ಇವರು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಅದು ಎಲ್ಲಿ ಹೋಗಿದೆ ? ಪ್ರಶ್ನೆಗೆ ಉತ್ತರ ಬಂದಿದ್ದರೆ, ನಿಮ್ಮ ಕಛೇರಿಗಾದರೂ ಬರಬೇಕು. ಅದನ್ನು ಬಿಟ್ಟು ಉತ್ತರ ಕೊಟ್ಟಿದ್ದೇವೆಂದು ಹೇಳಿದರೆ ಏನರ್ಥ ?

ಶ್ರೀ ಬಿ. ಎಸ್ ಯಡಿಯೂರಪ್ಪ.—ಈ ಸರ್ಕಾರ ಬಡಜನರ ಬಗ್ಗೆ ಸತ್ತಿದೆಯೇ ಎಂದು ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಜಿ. ಎಂ. ಕಾಸಿಂ.—ಇವರು ಚೀಟಿಂಗ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಎಸ್. ನಾರಾಯಣ ರಾವ್.—ಇವತ್ತು ಯಾವುದಕ್ಕೆ ಉತ್ತರವನ್ನು ಟೇಬಲ್ ಮೇಲೆ ಇಟ್ಟಿದ್ದಾರೆಂಬುದನ್ನು ಹೇಳಿರಿ. ಯಾವುದಕ್ಕೂ ಉತ್ತರ ಬಂದೇ ಇಲ್ಲ. ಆದನ್ನು ಮಾನ್ಯ ಮಂತ್ರಿಗಳು ಇನ್ನೊಮ್ಮೆ ವೆರಿಫೈ ಮಾಡಿ ಹೇಳಿರಿ. ಈ ಹಿಂದೆ ಅವರು ಉತ್ತರವನ್ನು ಟೇಬಲ್ ಮೇಲೆ ಇಡಲಾಗಿದೆ ಎಂಬುದಾಗಿ ಏನು ಹೇಳಿದ್ದಾರೆ, ಅದು ಪ್ರೊಸೀಡಿಂಗ್‌ಗೆ ಹೋಗುವುದು ಬೇಡ. ಆವರು ಏನು ಉತ್ತರ ಉತ್ತರ ಹೇಳಿದ್ದಾರೆ ಅದನ್ನು ರೆಕಾರ್ಡಿನಿಂದ ತೆಗೆದುಹಾಕಬೇಕು.

ಗೊಂದಲ

ಶ್ರೀ ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ,

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಸದಸ್ಯರು ಯಾರು ಯಾರು ಲಿಖಿತ ಪ್ರಶ್ನೆಗಳನ್ನು ಕೇಳಿದ್ದಾರೋ, ಅವರಿಗೆಲ್ಲಾ ಉತ್ತರಗಳನ್ನು ಈಗಾಗಲೇ ಕಳುಹಿಸಿದ್ದೇವೆ.

ಅಧ್ಯಕ್ಷರು.—ಗುರುಪ್ರಸಾದ್ ರವರು ಏನೋ ಹೇಳುವವರಿದ್ದಾರೆ. ಅವರು ಹೇಳಲಿ.

ಶ್ರೀ ಬಿ. ಗುರುಪ್ರಸಾದ್.—ಲಿಖಿತ ಮೂಲಕ ಪ್ರಶ್ನೆಗಳು ಏತಕ್ಕೆ ಬರುತ್ತಾವೆಂದರೆ, ಎಲ್ಲ ಸದಸ್ಯರು ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕಳುಹಿಸುತ್ತಾರೆ. ಆದರೆ ತಾವು ಆದ್ಯತೆಗಳನ್ನು ಬ್ಯಾರೆಟ್ ಮಾಡಿ ದಿವಸಕ್ಕೆ ೨೦ ಪ್ರಶ್ನೆಗಳನ್ನು ಸದನದಲ್ಲಿ ಉತ್ತರಿಸುವ ಪ್ರಶ್ನೆಗಳನ್ನಾಗಿ ತೆಗೆದುಕೊಳ್ಳುತ್ತೀರಿ. ಇದರಿಂದ ಇನ್ನುಳಿದ ಪ್ರಶ್ನೆಗಳು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಆಗುತ್ತವೆ. ನನ್ನ ಮೂರು ಪ್ರಶ್ನೆಗಳು ನಿನ್ನೆಯಿಂದ ಬಂದಿವೆ. ಆದರೆ ಆ ಮೂರು ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರ ಬಂದಿಲ್ಲ, ಇದರ ಬಗ್ಗೆ ನಿಮ್ಮ ಕಾರ್ಯದರ್ಶಿಯವರನ್ನು ಕೇಳಿದ್ದೇನೆ. ಮಂತ್ರಿಗಳನ್ನೂ ಕೂಡ ಕೇಳಿದ್ದೇನೆ. ಆದರೆ ಒಂದು ಪ್ರಶ್ನೆಗೂ ಉತ್ತರ ಬಂದಿಲ್ಲ. ಇದರಿಂದ ನಾವು ಇಲ್ಲಿ ನಮ್ಮ ಜವಾಬ್ದಾರಿಯನ್ನು ಯಾವ ರೀತಿ ನಿರ್ವಹಿಸಬೇಕು ಮಂತ್ರಿಗಳು ಬರೀ ಖಾಲಿ ಪೇಪರ್ ಇಟ್ಟು ಕೊಂಡಿರುತ್ತಾರೆ. ಅವು ಖಾಲಿ ಪೇಪರ್ ಏನೋ ನನಗೆ ಗೊತ್ತಿಲ್ಲ. ಉತ್ತರಗಳನ್ನು ಸದನದಲ್ಲಿಟ್ಟಿದ್ದೇ

ವೆಂದು ಹೇಳಿದ ಕೂಡಲೆ ಆಗುವುದಿಲ್ಲ. That does not mean that you have given answers. These people are not in a position to give answers because these are dynamic questoins.

(ಗೊಂದಲ)

ಅಧ್ಯಕ್ಷರು.—ಈಗಾಗಲೇ ಆದರ ಬಗ್ಗೆ ಖರ್ಗೆ ಯವರು ಹೇಳಿದ್ದಾರೆ. ಕಾನಡೆಯವರೇ ತಾವು ಕುಳಿತುಕೊಳ್ಳಿ.

ಶ್ರೀ ಜಿ. ಎಂ. ಕಾನಡೆ.—ಮಂತ್ರಿಗಳಿಗೆ ಛೀಮಾರಿ ಹಾಕಿ ಅಂತ ಹೇಳಿದರೂ ತಾವು ಛೀಮಾರಿ ಹಾಕುವುದಿಲ್ಲ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಛೀಮಾರಿ ಹಾಕುವುದು ಅಂದರೆ ಏನರ್ಥ? ಎನು ಮಾತನಾಡುತ್ತೀರಿ? ಉತ್ತರವನ್ನು ಸರ್ಕಾರ ಕೊಟ್ಟಿದೆ.

(ಗೊಂದಲ)

ಶ್ರೀ ಜಿ. ಎಂ. ಕಾನಡೆ.—ಹಾಗದರೆ ನಿಮ್ಮ ಉತ್ತರ ಎಲ್ಲಿಗೆ ಹೋಯಿತು? ಇಲ್ಲಿ ಉತ್ತರ ಕೋಟ್ಟಿದ್ದೇವೆಂದು ಹೇಳಿ ಆ ಉತ್ತರವನ್ನು ನಿಮ್ಮ ಮನೆಯಲ್ಲಿಟ್ಟುಕೊಡಿದ್ದೀರಾ?

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಸರ್ಕಾರದ ಅದಕ್ಷತೆಯಿಂದ ಮಾನ್ಯ ಸ್ಪೀಕರ್‌ರವರಿಗೆ ಯಾವುದೇ ರೀತಿಯ ಅವಹೇಳನ ಮಾಡುವುದು ಸರಿಯಲ್ಲ. ಮಾನ್ಯ ಎಂ. ಎಸ್. ಕೃಷ್ಣನ್ ಕೂಡಾ ನಿಮಗೆ ನಾವು ಛೀಮಾರಿ ಹಾಕುತ್ತೇವೆ ಎಂದು ಹೇಳಿದ್ದಾರೆ. ಸಿಟ್ಟಿನ ಭರದಲ್ಲಿ ಅವರು ಹೇಳಿರಬಹುದು. ಅವರಿಗೆ ಛೀಮಾರಿ ಹಾಕುವುದಕ್ಕೆ ಆಗದೇ ಇದ್ದರೆ ನಿಮಗೆ ಛೀಮಾರಿ ಹಾಕಬೇಕಾಗುತ್ತದೆಂದು ಅವರು ಹೇಳಿದರು.

ಅಧ್ಯಕ್ಷರು.—ಕೃಷ್ಣನ್ ಅವರೇ, ತಾವು ಹಾಗೆ ಹೇಳಿದ್ದು ಖರೇ ಏನು?

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೆ ಛೀಮಾರಿ ತಾವು ಹಾಕಬೇಕು ಎಂದು ನಾನು ಹೇಳಿದ್ದು. ನಿಮಗೆ ಅಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಅವರಿಗೆ ಛೀಮಾರಿ ಹಾಕದೇ ಇದ್ದರೆ ನಿಮಗೆ ಛೀಮಾರಿ ಹಾಕಬೇಕಾಗುತ್ತದೆಂದು ಅವರು ಹೇಳಿದರು.

ಅಧ್ಯಕ್ಷರು.—ಕೃಷ್ಣನ್ ಅವರೇ, ತಾವು ಹಾಗೆ ಹೇಳಿದ್ದರೆ ಆ ಮಾತನ್ನು ತಾವು ವಾಪಸ್ ಪಡೆಯಬೇಕಾಗುತ್ತದೆ. ತಮ್ಮಂತಹವರು ಹಾಗೆ ಹೇಳುವುದು ಸರಿಯಲ್ಲ. ನಾನು ಸರ್ಕಾರಕ್ಕೆ ಕಂಪೆಲ್ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ಮಾಡಿದ ತಪ್ಪಿಗೂ ನಮಗೂ ಏನು ಸಂಬಂಧ? ತಾವು ಹಾಗೆ ಏನಾದರೂ ಹೇಳಿದ್ದರೆ ಅದನ್ನು ವಾಪಸ್ ಪಡೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳಿದ್ದು ಏನೆಂದರೆ, ಈ ರೀತಿಯ ಸಮಸ್ಯೆ ಇದೆ, ತಮ್ಮ ಮಾತನ್ನು ಅವರು ಕೇಳುತ್ತಿಲ್ಲ, ತಾವು ಅನೇಕ ಸಲ ಹೇಳಿದರೂ ಅವರು ಇದುವರೆವಿಗೂ ತಿಳಿದುಕೊಂಡಿಲ್ಲವಾದ್ದರಿಂದ ತಾವು ಅವರಿಗೆ ಛೀಮಾರಿ ಹಾಕಬೇಕೆಂದು ಹೇಳಿದೆ. ತಮ್ಮ ಮುಖಾಂತರ ಅವರಿಗೆ ಛೀಮಾರಿ ಹಾಕಬೇಕೆಂದು ಹೇಳಿದ್ದು. ನಿಮಗೆ ಹಾಗೆ ಏನಾದರೂ ಹೇಳಿದ್ದರೆ ಅದು ತಪ್ಪು. ಹಾಗೆ ಹೇಳಿದ್ದರೆ ಅದನ್ನು ರೆಕಾರ್ಡಿನಿಂದ ತೆಗೆಸಿಬಿಡಿ.

ಅಧ್ಯಕ್ಷರು.—ಒಂದು ಪಕ್ಷ ತಾವು ಹಾಗೆ ಹೇಳಿದರೆ ಅದು ತಪ್ಪು ಆಗುತ್ತದೆ. ಅದನ್ನು ತಾವು ವಾಪಸ್ ಪಡೆಯಬೇಕಾಗುತ್ತದೆ. ನಾನು ಸರ್ಕಾರವನ್ನು ಕಂಪೆಲ್ ಮಾಡುವುದಕ್ಕಾಗುವುದಿಲ್ಲ. ನಾನು ತಮ್ಮಿಂದ ಚುನಾಯಿತನಾಗಿರುವವನು. ತಾವು ಹಾಗೆ ಹೇಳಿಲ್ಲವೆಂದು ಹೇಳುತ್ತಿದ್ದೀರಿ. ಒಂದು ವೇಳೆ ತಾವು ಹಾಗೆ ಹೇಳಿದ್ದರೆ ಅದನ್ನು ಕಾರ್ಯದಿಂದ ತೆಗೆದುಹಾಕುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸರ್ವ ಕಾಲದಿಂದಲೂ ಸರ್ಕಾರ ಉತ್ತರ ಕೊಡುತ್ತಿದೆ.

ಅಧ್ಯಕ್ಷರು.—ಕೆ. ಜೆಜ್. ಪಾಟೀಲರೇ, ಅವರು ಹಾಗೆ ಹೇಳಿಲ್ಲ ಎನ್ನುತ್ತಿದ್ದಾರೆ. ಅಕಸ್ಮಾತ್ ಹೇಳಿದ್ದರೆ ಅದು ಯೋಗ್ಯ ಅಲ್ಲ. ಅಕಸ್ಮಾತ್ ಹಾಗೆ ಏನಾದರೂ ಹೇಳಿದ್ದರೆ ಅದನ್ನು ಎಕ್ಸ್‌ಪಂಚ್ ಮಾಡುತ್ತೇನೆ. ಅವರು ಅಂದಿಲ್ಲ ಎಂದು ಹೇಳುತ್ತಾರೆ. ಇಲ್ಲಿಗೆ ವಿಷಯ ಮುಗಿಯಿತು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಸರ್ಕಾರದಿಂದ ಉತ್ತರ ಬರದಿದ್ದರೆ ಸರ್ಕಾರಕ್ಕೆ ಕಂಪೆಲ್ ಮಾಡುವುದಕ್ಕಾಗುವುದಿಲ್ಲವೆಂದು ತಾವು ಹೇಳಿದಿರಿ. ಆದರೆ ಮಾನ್ಯ ಸಚಿವರಾದ ಎಂ. ಪಿ. ಪ್ರಕಾಶ್ ಅವರು ಉತ್ತರವನ್ನು ಕಳುಹಿಸಿದ್ದೇವೆ ಎಂದು ಹೇಳಿದರು. ಅವರು ಕಳುಹಿಸಿಕೊಟ್ಟಮೇಲೆ ಅದನ್ನು ನಮಗೆ ತಲುಪಿಸುವುದು ನಿಮ್ಮ ಕಾರ್ಯಾಲಯದ ಕೆಲಸವಾಗುತ್ತದೆ. ನಿಮ್ಮ ಕಾರ್ಯಾಲಯದವರು ಅದನ್ನು ಅಚ್ಚು ಹಾಕಿ ಕೊಟ್ಟಿಲ್ಲವೆಂದರೆ ಅದು ನಿಮ್ಮ ಕಾರ್ಯಾಲಯದ ತಪ್ಪು ಆಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೇ, ಈ ದಿವಸದ ಪಟ್ಟಿಯಲ್ಲಿ ಏನು ೩೧ ಚುಕ್ಕೆ ರಹಿತ ಪ್ರಶ್ನೆಗಳು ಇವೆ. ಅವುಗಳಲ್ಲಿ ೬ ಕ್ಕೆ ಬಿಟ್ಟು ಮಿಕ್ಕ ಪ್ರಶ್ನೆಗಳಿಗೆ ಉತ್ತರವನ್ನು ಇವತ್ತು ಸಭೆ ಪ್ರಾರಂಭ ಆಗುವುದಕ್ಕೆ ಮುಂಚೆ ೯ ಗಂಟೆಗೇ ಕೊಡಲಾಗಿದೆ. ಇವತ್ತು ಸದನ ಬೆಳಿಗ್ಗೆ ಸೇರಿದ್ದರಿಂದ ೬ ಪ್ರಶ್ನೆಗಳಿಗೆ ಉತ್ತರದ ಪ್ರತಿ ತಯಾರಿಸಲು ಸ್ವಲ್ಪ ತಡವಾಗಿದೆ. ಉಳಿದಿರತಕ್ಕ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಕೊಡಲಾಗಿದೆ. ಪ್ರಶ್ನೆಗಳು ಎಷ್ಟೇ ಇದ್ದರೂ ಅವಕ್ಕೆ ಉತ್ತರವನ್ನು ಕೊಡಲಾರದಷ್ಟು ಹೊಣೆಗೇಡಿತನವನ್ನು ಈ ಸರ್ಕಾರ ಮಾಡುವುದಿಲ್ಲ. ಸರ್ಕಾರ ಉತ್ತರವನ್ನು ಕೊಡುವುದಕ್ಕೆ ಆಗದಂತಹ ಅದ್ಭುತ ಪ್ರಶ್ನೆಗಳನ್ನು ಕೇಳಿದ್ದು ಸರ್ಕಾರ ಮುಖಿಪೇಡಿತನದಿಂದ ಅದಕ್ಕೆ ಉತ್ತರವನ್ನು ಕೊಡುತ್ತಿಲ್ಲವೆನ್ನುವ ಘಾಟಿಯಲ್ಲಿ ಮಾನ್ಯ ಗುರುಪ್ರಸಾದ್ ಅವರು ಹೇಳಿದರು.

೧೧–೩೦ ಎ. .

ಇಂತಹ ಪದಗಳನ್ನು ಇನ್ನು ಬಳಸತಕ್ಕ ಅಗತ್ಯವಿಲ್ಲ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಿ ಕೊಡುತ್ತೇವೆ. ಆ ಉತ್ತರಗಳು ಇವತ್ತು ಮಧ್ಯಾಹ್ನ ಸದಸ್ಯರುಗಳಿಗೆ ಮುಟ್ಟಬಹುದು.

ಶ್ರೀ ಎಸ್. ಬಂಗಾರಪ್ಪ.—ಅಧಿವೇಶನ ಇಂದು ಬೆಳಿಗ್ಗೆ ೯ ಗಂಟೆಗೆ ಇರುವಾಗ ಇವತ್ತು ಬೆಳಿಗ್ಗೆ ಉತ್ತರಗಳನ್ನು ಕಳುಹಿಸಿದರೆ ಹೇಗೆ ? ನಿನ್ನೆ ದಿವಸವೇ ಉತ್ತರವನ್ನು ಕಳುಹಿಸಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಲಿಖಿತ ಮೂಲಕ ಉತ್ತರಿಸುವ ಆರು ಪ್ರಶ್ನೆಗಳನ್ನು ಬಿಟ್ಟು ಉಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಇವತ್ತು ಬೆಳಿಗ್ಗೆ ೯ ಗಂಟೆಗೇ ಉತ್ತರ ಬಂದಿವೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ನೀವು ಕಳುಹಿಸಿದರೆ ವಿಧಾನಮಂಡಲದ ಕಾರ್ಯಾಲಯದವರು ನಮಗೆ ಯಾವಾಗ ಕೊಡುತ್ತಾರೆ ? ನಿನ್ನೆ ಬಂದಿದ್ದರೆ ಅವರು ಕಾಪಿಗಳನ್ನು ಮಾಡಿ ನಮಗೆ ಕಳುಹಿಸಿ ಕೊಡುತ್ತಿದ್ದರು.

ಶ್ರೀ ಎಂ. ಪಿ. ಪ್ರಕಾಶ್.—ಯಾವ್ಯಾವ ಪ್ರಶ್ನೆಗಳಿಗೆ ಉತ್ತರಗಳು ತಯಾರಾಗಿವೆ ಅವುಗಳ ಒಂದೊಂದು ಕಾಪಿಯನ್ನು ಲೈಬ್ರರಿಯಲ್ಲಿ ಇಟ್ಟಿರುತ್ತೇವೆ. ಮಾನ್ಯ ಸದಸ್ಯರುಗಳಿಗೆ ಇವತ್ತು ಒಂದೂವರೆ ಗಂಟೆಗೆ ಉತ್ತರಗಳು ಬರುತ್ತವೆ.

ಶ್ರೀ ಬಿ. ಗುರುಪ್ರಸಾದ್.—ಲೈಬ್ರರಿಯಲ್ಲಿ ಕಾಪಿಗಳೇ ಇಲ್ಲ.

ಶ್ರೀ ಪಿ. ಬೈರೇಗೌಡ.—ನೀವು ಲೈಬ್ರರಿಯಲ್ಲಿ ಕಾಪಿಗಳನ್ನು ಇಟ್ಟಿದ್ದರೆ ನಾವು ಅಲ್ಲಿಗೆ ಹೋಗಿ ನೋಡಿಕೊಳ್ಳಬೇಕೋ ? ಹಾಗಾದರೆ ನೀವು ಅಲ್ಲೇ ಹೋಗಿ ಸರ್ಕಾರ ನಡೆಸಿ.

ಶ್ರೀ ಎಂ. ಪಿ. ಪ್ರಕಾಶ್.—ಇವತ್ತು ಬೆಳಿಗ್ಗೆ ಅಧಿವೇಶನ ಇದ್ದುದರಿಂದ ಉತ್ತರಗಳ ಪ್ರತಿಗಳನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ೩೧ ಚುಕ್ಕೆರಹಿತ ಪ್ರಶ್ನೆಗಳಲ್ಲಿ ೨೬ ಪ್ರಶ್ನೆಗಳಿಗೆ ಉತ್ತರ ಬಂದಿದೆ. ಪ್ರತಿಗಳನ್ನು ಮಾಡಿ ಕಳುಹಿಸಲಿಕ್ಕೆ ಸ್ವಲ್ಪ ವಿಳಂಬವಾಗಿದೆ. ಅನ್ಯ ಕಾರಣಗಳಿಂದ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕ ಕೆಲಸ ಮಾಡುತ್ತಿರುವುದು ಸರಿಯಲ್ಲ. ಲೈಬ್ರರಿಯಲ್ಲಿ ನಾವು ಕಾಪಗಳನ್ನು ಇಟ್ಟ ತಕ್ಷಣ ನಾವು ಅಲ್ಲಿಗೆ ಹೋಗಿ ಸರ್ಕಾರ ನಡೆಸುವುದಕ್ಕಾಗುವುದಿಲ್ಲ, ಅತ್ಯಂತ ಸೀನಿಯರ್ ಮೆಂಬರ್ ಆಗಿರತಕ್ಕವರು ಈ ರೀತಿ ಹೇಳತಕ್ಕದ್ದು ಸರಿಯಲ್ಲ.

ಶ್ರೀ ಪಿ. ಬೈರೇಗೌಡ.—ಈ ಮಾತನ್ನು ಒಂದು ಸಾರಿ ಅಲ್ಲ, ನೂರು ಸಾರಿ ಹೇಳಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಅವರ ವಿಷಯಗಳನ್ನು ಇಂತಹ ಸಣ್ಣ ವಿಷಯಗಳ ಮೂಲಕ ಪ್ರಸ್ತಾಪ ಮಾಡುತ್ತಾರೆ ಅಷ್ಟೆ.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡ್ರಿ. ಈಗ ಒಂದು ನಿಲುವಳಿ ಸೂಚನೆ ಬಂದಿದೆ. ''ಅದೇನೆಂದರೆ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಆಯ್ಕೆ ನಿಯಮಾವಳಿಗಳನ್ನು ಕಡೆಗಣಿಸಿ ಖಾಸಗಿ ಅಭ್ಯರ್ಥಿಯಾದ ರಾಮಕೃಷ್ಣ ರೆಡ್ಡಿ ಎಂಬುವರು ಅರ್ಹತೆ ಇಲ್ಲದಿದ್ದರೂ ಸರ್ಕಾರ ಅವರಿಗೆ ಪ್ರವೇಶ ನೀಡಿರುವ ಬಗ್ಗೆ'' ನಿಲುವಳಿ ಸೂಚನೆ ಬಂದಿದೆ. ಅದನ್ನು ನಾನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿ ಮಂಗಳವಾರ ದಿವಸ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಕಾನೂನು ಮಾಡತಕ್ಕವರೇ ಈ ಬಗ್ಗೆ ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ. ಅದನ್ನು ಕಾಲಿಂಗ್ ಅಟೆನ್‌ಷನ್‌ಗೆ ಕನ್‌ವರ್ಟ್ ಮಾಡುವುದಕ್ಕೆ ಬರುವುದಿಲ್ಲ. ವಿಷಯದ ಮಹತ್ವವನ್ನು ತಾವು ತಿಳಿಯದೆ ಈ ರೀತಿ ಮಾಡತಕ್ಕದ್ದು ಸರಿಯಲ್ಲ.

ಅಧ್ಯಕ್ಷರು.—ನಾನು ಈಗಾಗಲೇ ಕನ್ವರ್ಟ್ ಮಾಡಿ ಮಂಗಳವಾರದ ದಿವಸ ಅದನ್ನು ಇಟ್ಟಿದ್ದೇನೆ. ತಮಗೆ ಇಂಟಿಮೇಷನ್ ಸಹ ಮಾಡಿದ್ದೇನೆ.

ಶ್ರೀ ಬಿ. ಲಕ್ಕಪ್ಪ. —ಸ್ವಾಮಿ, ನಾವು ಹೇಳುವುದನ್ನು ಸ್ವಲ್ಪ ಕೇಳಿ.

ಅಧ್ಯಕ್ಷರು.—ಕೇಳುವುದು ಬೇಕಾಗಿಲ್ಲ.

ಶ್ರೀ ಬಿ. ಲಕ್ಕಪ್ಪ.—ಇದು ಈ ಸದನದ ಅಸ್ತಿತ್ವವನ್ನು ಪ್ರಶ್ನೆ ಮಾಡತಕ್ಕ ಪ್ರಶ್ನೆ ಆಗಿದೆ. ಇಲ್ಲಿ ಮಾಡತಕ್ಕ ಕಾನೂನನ್ನು ಯಾರು ಪಾಲನೆ ಮಾಡಬೇಕು? ಇಲ್ಲಿ ಪ್ರಜಾಪ್ರಭುತ್ವ ಇದೆಯೋ? ಅಥವ ಸರ್ವಾಧಿಕಾರವಿದೆಯೋ ಎಂದು ಪ್ರಶ್ನೆ ಮಾಡಬೇಕಾಗಿದೆ. ತಾವು ನಮಗೆ ರಕ್ಷಣೆ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ನಾನು ನಿಮಗೆ ರಕ್ಷಣೆ ಕೊಡಬೇಕೆಂದು ಈ ರೀತಿ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಮಗೆ ಕಳುಹಿಸಿ ಕೊಟ್ಟಿರತಕ್ಕ ನಿಲುವಳಿ ಸೂಚನೆ.....

ಶ್ರೀ ವೈ. ಕೆ. ರಾಮಯ್ಯ.—ನಾನು ಬಹಳ ಹೊತ್ತಿನಿಂದ ನಿಂತಿದ್ದೇನೆ. ನಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರೋ ಅಥವಾ ಇಲ್ಲವೋ? ಅವಕಾಶ ಕೊಡುತ್ತೇನೆಂದರೆ ಕೂಡುತ್ತೇನೆ.

ಅಧ್ಯಕ್ಷರು.—ಅವಕಾಶ ಕೊಡುತ್ತೇನೆ, ಈಗ ತಾವು ಕೂಡಿ.

ಶ್ರೀ ಎಸ್.ಬಂಗಾರಪ್ಪ.—ತಮಗೆ ಕಳುಹಿಸಿರತಕ್ಕ ನಿಲುವಳಿ ಸೂಚನೆಯನ್ನು ತಾವು ಗಮನ ಸೆಳೆಯುವ ಸೂಚನೆಯನ್ನಾಗಿ ಪರಿವರ್ತನೆ ಮಾಡಲಿಕ್ಕೆ ಇದು ಯಾವರೀತಿ ಬರುತ್ತದೆ ಎನ್ನುವುದಕ್ಕೆ ಕೆಲವು ನಿರ್ದಿಷ್ಟವಾದ ಆಧಾರಗಳಿರುತ್ತವೆ. ಇವತ್ತು ಇಲ್ಲಿ ಅನೇಕ ಮಾನ್ಯ ಸದಸ್ಯರು ಸರ್ಕಾರವೇ ನಿರ್ವಹಣೆ ಮಾಡತಕ್ಕಂಥ, ಸರ್ಕಾರವೇ ಜಾರಿಗೆ ತಂದಿರತಕ್ಕಂಥ ನಿಯಮಾವಳಿಗಳನ್ನು, ಕಾನೂನನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿ ೧೯೮೮ರಲ್ಲಿ ಸರ್ಕಾರ ಆಜ್ಞೆಯಾದ್ದನ್ನು ಹೊರಡಿಸಿ ತಿರಿಲ್ ಸೀಟುಗಳಲ್ಲಿ ಒಂದು ಎಂ. ಡಿ. ಸೀಟನ್ನು ಶ್ರೀ ರೆಡ್ಡಿಯವರಿಗೆ ಕೊಟ್ಟಿದ್ದೀರಿ. ತಾವೇ ಹೇಳಿದ ಹಾಗೆ...

ಅಧ್ಯಕ್ಷರು.—ಅದನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ಮಾರ್ಪಾಡು ಮಾಡಿದ್ದೇನೆ. I have already given a ruling. There cannot be any discussion on this. ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿಯ ಆಜ್ಞೆ ಹೊರಡಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರವೇ ಇಲ್ಲ.

ಅಧ್ಯಕ್ಷರು.—ಈ ನಿಲುವಳಿ ಸೂಚನೆಯನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ಕನ್ವರ್ಟ್ ಮಾಡಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಗಮನ ಸೆಳೆಯುವ ಸೂಚನೆ ಆದರೆ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಬರುವುದಿಲ್ಲ. ಬೇರೆ ವಿಷಯ ಕೇಳುವುದಕ್ಕೆ ಬರುವುದಿಲ್ಲ. ಇದು ತಪ್ಪಾಗಿ ಗೊತ್ತಿದೆ, ಚರ್ಚೆ ರೂಪದಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ. ಅಡ್ಜರ್ನ್‌ಮೆಂಟ್ ಮೋಷನ್ ಆದರೆ ಮಾನ್ಯ ಸದಸ್ಯರು ಇದರ ಚರ್ಚೆಯಲ್ಲಿ ಭಾಗವಹಿಸಿ ಸಕಾರಣಗಳಿಂದ ಇದರ ಮೇಲೆ, ವಿಷಯದ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಲು ಸಿದ್ಧರಾಗಿರುತ್ತಾರೆ. ಆದರ ವ್ಯಾಪ್ತಿಯನ್ನು ತಾವು ಬಲ್ಲಿರಿ. ತಾವು ಇಷ್ಟು ಅನುಭವ ಇರತಕ್ಕಂಥವರು, ತಪ್ಪಾಗಿ ನಾನು ಹೇಳಿಕೊಡಬೇಕೇನು? ಆದ್ದರಿಂದ ಗಮನ ಸೆಳೆಯುವ ಸೂಚನೆ ಆದರೆ ಈ ವಿಚಾರದಲ್ಲಿ ಹೆಚ್ಚಿನ ವಿವರಗಳನ್ನು ಕೊಡುವುದಕ್ಕೆ ಸದಸ್ಯರಿಗೆ ಸಾಧ್ಯವಾಗುವುದಿಲ್ಲ. ನಾನು ಈ ಕಡೆಯವರಿಗೆ ಅಂತ ಹೇಳುತ್ತಿಲ್ಲ. ಆ ಕಡೆಯೂ ಇರಬಹುದು.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಅಂತ ಹೇಳಿ ರೀಕನ್ಸಿಡರ್ ಮಾಡಿ ಅಂತ ಹೇಳುತ್ತಿದ್ದೀರಾ?

ಶ್ರೀ ಎಸ್. ಬಂಗಾರಪ್ಪ.—ಇದು ರೀಕನ್ಸಿಡರ್ ಮಾಡುವ ಪ್ರಶ್ನೆಯೇ ಅಲ್ಲ.

ಅಧ್ಯಕ್ಷರು.—ಇದು ಅಡ್ಜರ್ನ್‌ಮೆಂಟ್ ಮೋಷನ್ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ ಕಾಲ್ ಅಟೆನ್‌ಶನ್ ಆಗಿ ಕನ್ವರ್ಟ್ ಮಾಡಿದ್ದೇನೆ. ಮಂಗಳವಾರ ದಿವಸ ಸರ್ಕಾರದವರು ಇದಕ್ಕೆ ಉತ್ತರ ಕೊಡುತ್ತಾರೆಂದು ಹೇಳಿದ್ದೇನೆ. ಈಗಾಗಲೇ ದಿವಸ ನಿಗದಿ ಆಗಿಬಿಟ್ಟಿದೆ. I have already given a ruling. ಇದರ ಮೇಲೆ I have to reconsider ಅಂತ ನೀವು ಹೇಳುತ್ತೀರೇನು? ಹಾಗಿದ್ದರೆ ನಾನು ಸರ್ಕಾರಕ್ಕೆ ಕೇಳುತ್ತೇನೆ. ಅವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ನನಗೆ ಗೊತ್ತು. ಯಾವ ಸ್ಟೇಜ್‌ಗೆ ತಾವು ಹೋಗಿದ್ದೀರಿ ಮತ್ತು ಯಾವ ಸ್ಟೇಜ್‌ಗೆ ನಮ್ಮನ್ನು ತರಬೇಕು ಅಂತೆ ಮಾಡಿದ್ದೀರಿ ಎಂದು. ಅಷ್ಟು ನನಗೆ ಅರ್ಥವಾಗುವುದಿಲ್ಲವೇ?

ಅಧ್ಯಕ್ಷರು.—ನೀವು ಆ ರೀತಿಯಿಂದ ತಿಳಿದುಕೊಂಡರೆ ನಾನು ಏನು ಮಾಡಲಿ.

ಶ್ರೀ ಎಸ್. ಬಂಗಾರಪ್ಪ.—ಇದು ಯಾರಿಗೆ ಗೊತ್ತಾಗುವುದಿಲ್ಲ? ನಾನು ಕೇಳತಕ್ಕಂಥಾದ್ದು ರೀಕನ್ಸಿಡರ್ ಮಾಡಬೇಕು ಎನ್ನುವ ಪ್ರಶ್ನೆ ಅಲ್ಲ. ಏಕೆಂದರೆ ಸರ್ಕಾರ ಈ ರೀತಿಯ ತಜ್ಞೆಯನ್ನು ಹೊರಡಿಸಿರುವಂಥಾದ್ದು, ಈ ಪ್ರಕರಣ ಮೊದಲಬಾರಿಗೆ ಇಲ್ಲಿ ಬಂದಿರುವಂಥಾದ್ದು, ಕಾನೂನಿನಲ್ಲಿ ಡಿಸ್ಕ್ರಿಶನರಿ ಪವರ್ ಅಥವಾ ಕೋಟಾ ಸರ್ಕಾರಕ್ಕೆ ಇದ್ದರೆ ಬೇಕಾದರೆ ಮಾಡಿಕೊಳ್ಳಿ. ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಇವರೇ ಕಾನೂನನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿ, ಕಾನೂನಿಗೆ ವ್ಯತಿರಿಕ್ತವಾಗಿ ನಡವಳಿಕೆಗಳನ್ನು ಸರ್ಕಾರ ಮಾಡಿದ ಮೇಲೆ ಈ ವಿಚಾರ ದೊಡ್ಡ ಪ್ರಕರಣ ಆಗುತ್ತದೋ ಇಲ್ಲವೋ? ನೀವೇ ಹೇಳಿ. ಅಂತಹ ದೊಡ್ಡ ಪ್ರಕರಣವನ್ನು ಗಮನ ಸೆಳೆಯುವ ಸೂಚನೆಯ ವ್ಯಾಪ್ತಿಗೆ ತಂದರೆ ಅದಕ್ಕೆ ಪ್ರಾಮುಖ್ಯತೆ ಎಷ್ಟರಮಟ್ಟಿಗೆ ಸಿಕ್ಕೀತೆಂದು ತಾವೇ ಯೋಚಿಸಿ. ಈ ವಿಚಾರವನ್ನು ನಾನು ತಮಗೆ ಬಿಡುತ್ತೇನೆ.

ಅಧ್ಯಕ್ಷರು.—ಅದಕ್ಕೆ ನಾನು ಏನು ಮಾಡಬೇಕು? ನಾನು ಈಗಾಗಲೇ ರೂಲಿಂಗ್ ಅನ್ನು ಕೊಟ್ಟುಬಿಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅದು ಬಹಳ ಸುಲಭ. ಈಗ ನೀವು ಇದರ ಬಗ್ಗೆ ರೂಲಿಂಗ್ ಕೊಟ್ಟಿದ್ದೀರಿ. ಈಗ ನೀವೇ ಇದನ್ನು ರೀಕನ್ಸಿಡರ್ ಮಾಡಿದರೆ ಬಹಳ ಒಳ್ಳೆಯದು. ನಿಲುವಳಿ ಸೂಚನೆ ರೂಪದಲ್ಲಿ ಇದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡತಕ್ಕಂಥಾದ್ದು ಬಹಳ ಅವಶ್ಯಕ. ನಾವು ಸರ್ಕಾರವನ್ನು ಪ್ರಶ್ನೆ ಮಾಡತಕ್ಕದ್ದು ಇದೆ, ಏಂದೂಕೂಡ ನಡೆಯದೇ ಇರತಕ್ಕಂಥ ಮಹಾನ್ ಘಟನೆ ಇದು ಇರುವುದರಿಂದ ಇದು ಚರ್ಚೆಗೆ ಒಳಪಡಬೇಕಾಗುತ್ತದೆ. ತಾವು ಅಪಾರ ಅನುಭವ ಇರತಕ್ಕಂಥವರು. ಇದನ್ನು ಗಮನ ಸೆಳೆಯುವ ಸೂಚನೆಯ ವ್ಯಾಪ್ತಿಗೆ ತಂದರೆ ಏನಾಗುತ್ತದೆ. ತಾವು ಸದಸ್ಯರ ರಕ್ಷಣೆಗೆ ಬರಬೇಕಾಗುತ್ತದೆ. ತಾವು ಬಾರದಿದ್ದರೆ ಬಹಳ ಕಷ್ಟವಾಗುತ್ತದೆ. ರೂಲಿಂಗ್ ಅನ್ನು ರೀಕನ್ಸಿಡರ್ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಹಳೆಯ ವ್ಯಾಖ್ಯಾನಗಳು ಬೇಡ. ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಾಗಿ ಬಂದಿದ್ದೇವೆ. ಸಾಕಷ್ಟು ವಿವರಗಳು ಇವೆ. ಯಾವರೀತಿಯಾಗಿ ಸರ್ಕಾರ ಈ ಆಜ್ಞೆ ಹೊರಡಿಸಿದೆ, ಏಕೆ ಸ್ಪೆಶಲ್ ಇಂಟರೆಸ್ಟ್

ತೆಗೆದುಕೊಂಡು ಮಾಡಿದೆ ಎಂಬುದರ ಬಗ್ಗೆ ಇದನ್ನು ಚರ್ಚೆಗೆ ಒಳಪಡಿಸಬೇಕಾಗುತ್ತದೆ. ಏಕೆಂದರೆ, ಮಾನ್ಯ ಬೊಮ್ಮಾಯಿಯವರು ಮೇಲ್ಮನೆಯಲ್ಲಿ ಕೊಟ್ಟಿರತಕ್ಕ ಉತ್ತರದ ಧಾಟಿ ನೋಡಿದರೆ, ಮುಖ್ಯಮಂತ್ರಿ ಎಂದು ಹೇಳಿದರೆ, ಅವರು ಡಿಕ್ಟೇಟರ್, ಅವರಿಗೆ ಕಾನೂನು ಏನು ಮಾಡುವಹಾಗೆ ಇಲ್ಲ, ಯಾವ ಸಂವಿಧಾನ ಇಲ್ಲ, ಬೇಕಾದರೆ ಕೋರ್ಟಿಗೆ ತೆಗೆದುಕೊಂಡು ಹೋಗಿ ಎಂದು ಹೇಳಿದ್ದಾರೆ. ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿ ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ರೀ ಕನ್‌ಸಿಡರ್ ಮಾಡಬೇಕೆಂದು ಹೇಳಿದ್ದೀರಿ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ತಾವು ಕೇಳುತ್ತಿದ್ದೀರಿ. ಆದ್ದರಿಂದ ಈ ಬಗ್ಗೆ ಲಾ ಮಿನಿಸ್ಟರು ಏನು ಹೇಳುತ್ತಾರೆ, ಕೇಳೋಣ.

ಶ್ರೀ ಎಸ್. ಬಂಗಾರಪ್ಪ.—ಪ್ರಿಲಿಮನರಿ ಸಬ್‌ಮಿಷನ್ ನಾನು ಎಲ್ಲಿ ಮಾಡಿದ್ದೀನಿ.

ಅಧ್ಯಕ್ಷರು.—ಪ್ರಿಲಿಮನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು ತಾವು ಕೇಳುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಪ್ರಿಲಿಮನರಿ ಸಬ್‌ಮಿಷನ್ ಮಾಡುವುದಕ್ಕೆ ಸಾಕಷ್ಟು ವಿವರಗಳನ್ನು ತೆಗೆದುಕೊಂಡು ಬಂದಿದ್ದೇವೆ. ಇದನ್ನು ಮಾಡಿದ ಮೇಲೆ ಡ್ರಾಫ್ಟ್ ಮಾಡಬೇಕೇ, ಬಿಡಬೇಕೇ ಎಂಬ ಬಗ್ಗೆ ತಾವು ರೂಲಿಂಗ್ ಕೊಡಿ. ನೀವು ಅವರನ್ನೂ ಕೇಳಿ ನಾವು ಬಿಡ ಎಂದು ಹೇಳುವುದಿಲ್ಲ.

ಅಧ್ಯಕ್ಷರು.—ನಿಮಗೆ ಇನ್ನೂ ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿಲ್ಲ. ನಾನು ಇದನ್ನು ಗಮನ ಸೆಳೆಯುವ ಸೂಚನೆಗೆ ಕನ್‌ವರ್ಟ್ ಮಾಡಿದ್ದೇನೆ. ಮಂಗಳವಾರ ಇದನ್ನು ಇಟ್ಟಿದ್ದೇನೆ. ತಾವು ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ ಎನ್ನತಕ್ಕಂಥ ಭಾವನೆಯನ್ನು ವ್ಯಕ್ತ ಮಾಡಿದ್ದೀರಿ. ನಾನು ಇದಕ್ಕೂ ಅವಕಾಶ ಕೊಟ್ಟಿಲ್ಲ. ಏಕೆಂದರೆ, ಗಮನ ಸೆಳೆಯುವ ಸೂಚನೆಗೆ ಕನ್‌ವರ್ಟ್ ಮಾಡಿದ್ದೇವೆ. ಆದರೂ ತಾವು ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ ಎಂದು ಕೇಳುವುದಕ್ಕೆ ಹತ್ತಿದ್ದೀರಿ. ಲಾ ಮಿನಿಸ್ಟರ್ ಅವರನ್ನೂ ಕೇಳಿ ಅನಂತರ ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾವಿನ್ನೂ ಇದರ ಪ್ರಿಲಿಮನರಿ ಏನು ಎಂಬ ವಿಚಾರವನ್ನೂ ಹೇಳುವುದಕ್ಕೆ ಸಹ ಪ್ರಯತ್ನ ಮಾಡಿಲ್ಲ.

ಅಧ್ಯಕ್ಷರು.—ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೊಡುವುದಕ್ಕೇ ಅವರನ್ನೂ ಕೇಳುತ್ತೇನೆ. ನಾನು ರೂಲಿಂಗ್ ಕೊಟ್ಟಿದ್ದೇನೆ. ಪಿ. ಎ. ಎಸ್. ಎಂದು ಕನ್ ವರ್ಟ್ ಮಾಡಿದ್ದೇನೆ, ಮಂಗಳವಾರ ಇಟ್ಟಿದ್ದೇನೆ. ತಾವು ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕಾಗಿತ್ತು, ಪಿ. ಎ. ಎಸ್. ಗೆ ಕನ್‌ವರ್ಟ್ ಮಾಡಬಾರದಿತ್ತು ಎನ್ನುವುದನ್ನೂ ಹೇಳಿದ್ದೀರಿ. ಈಗ ಅವರನ್ನೂ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಒಂದು ರೂಲಿಂಗ್ ಕೊಟ್ಟಮೇಲೆ, ಆ ರೂಲಿಂಗನ್ನು ರೀ ಕನ್‌ಸಿಡರ್ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ರೀ ಕನ್‌ಸಿಡರ್ ಮಾಡುವುದಕ್ಕೆ ಬರುತ್ತದೆ. ರೀ ಕನ್‌ಸಿಡರ್ ಮಾಡಿ, ನಿಮಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ಅದನ್ನೇ ನಾವು ಕೇಳುವುದು. ಇದನ್ನು ಮಾಡಿದರೆ ಸಾಕು. ಇದನ್ನು ಮಾಡುವಂಥ ಅಧಿಕಾರ ತಮಗೆ ಇದೆ.....

ಅಧ್ಯಕ್ಷರು.—ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕು, ಅಡ್ಜರ್ನ್‌ಮೆಂಟ್ ಮೋಷನ್ ಎಂದು ತೆಗೆದುಕೊಳ್ಳಬೇಕೆಂದು ತಾವೇನು ಬೇಳುತ್ತಿದ್ದೀರಿ, ಈ ಬಗ್ಗೆ ನಾನು ಈಗಾಗಲೇ ಕನ್‌ವರ್ಟ್ ಮಾಡಿ ರೂಲಿಂಗ್ ಕೊಟ್ಟಿದ್ದೇನೆ. ಪಿ. ಎ ಎಸ್. ಎಂದು ಕನ್‌ವರ್ಟ್ ಮಾಡಿದ್ದೇನೆ. ಮಂಗಳವಾರ ಇಟ್ಟಿದ್ದೇನೆ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಬೇಕಾಗಿತ್ತು, ಇದು ಮಹತ್ವದ ವಿಷಯ ಎಂದು ತಾವು ಹೇಳಿದಿರಿ. ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ ಎಂದು ತಾವು ಹೇಳುತ್ತಿದ್ದೀರಿ. ಈಗ ಲಾ ಮಿನಿಸ್ಟರು ಏನು ಹೇಳುತ್ತಾರೆ ಎಂಬುದನ್ನೂ ಕೇಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನಿಯಮಾವಳಿಗಳ ಪ್ರಕಾರ ಈ ಸಭೆಯಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಷಯಗಳನ್ನು ಕಾರಿತು, ಅದು ಅಲ್ಪಕಾಲಾವಧಿ ಚರ್ಚೆ

ಇರಬಹುದು, ಕಾಲಿಂಗ್ ಅಟೆನ್‌ಷನ್ ಇರಬಹುದು, ನಿಲುವಳಿ ಸೂಚನೆ ಇರಬಹುದು, ಯಾವುದೇ ರೂಪದಲ್ಲಿ ಸಾರ್ವಜನಿಕ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ಕೋರಬೇಕು. ಈ ರೀತಿ ಮಾನ್ಯ ಸದಸ್ಯರಿಂದ ಬೇಡಿಕೆ ಬಂದಾಗ, ಆವರು ಕೊಟ್ಟಿರತಕ್ಕ ವಿಷಯಗಳ ವಿಮರ್ಶೆಮಾಡಿ, ಯಾವ ರೂಪದಲ್ಲಿ ಈ ಮನೆಯಲ್ಲಿ ಪ್ರಸ್ತಾಪ ಮಾಡಬಹುದು ಎನ್ನುವುದರ ಬಗ್ಗೆ ಪೂರ್ಣವಾದ ಮತ್ತು ಕೊನೆಯ ತೀರ್ಮಾನವನ್ನು ಕೊಡತಕ್ಕ ಅಧಿಕಾರ ನಿಯಮಾವಳಿಗಳಲ್ಲಿ ತಮಗೆ ಇದೆ. ಇದರ ಜೊತೆಗೆ ನಿಯಮಾವಳಿಗಳನ್ನು ಅನುಸರಿಸತಕ್ಕ ಪದ್ಧತಿ ಸಂಪ್ರದಾಯ ಲೋಕಸಭೆಯಲ್ಲೂ ಇದೆ. ಲೋಕಸಭೆಯಲ್ಲಿ ಅನೇಕ ವಿಷಯಗಳನ್ನು, ಯಾವ ಪ್ರಸ್ತಾಪ ಮಾಡಬೇಕೆಂದು ಮಾನ್ಯ ಸದಸ್ಯರು ನೋಟೀಸ್‌ಗಳನ್ನು ಕೊಟ್ಟಿರುತ್ತಾರೆ, ಅವರನ್ನು ಕೇಳಬೇಕಾಗಿಯೂ ಇಲ್ಲ. ಪೂರ್ವಭಾವಿಯಾಗಿ ತಿಳಿವಳಿಕೆ ಪತ್ರ ಕಳುಹಿಸಬೇಕು ಅಷ್ಟೆ, ಯಾರ ವಿರುದ್ಧವಾಗಿಯೂ ಅದರೂ ತೀರ್ಮಾನವನ್ನು ಕೊಡತಕ್ಕ ಸಮಯದಲ್ಲಿ, ಅಂತಹವರನ್ನು ಕರೆಯಿಸಿ ಮಾತನಾಡಬೇಕೆಂದು, ಕಾನೂನಿನ ಸಂಪ್ರದಾಯ ಇದ್ದರೂ ಸಹಿತ ಈ ಮನೆಯ ಸಂಪ್ರದಾಯದ ಪ್ರಕಾರ, ಆ ರೀತಿ ಕೇಳಬೇಕಾಗಿಲ್ಲ. ಆದರೆ, ಆ ಸದಸ್ಯರಿಗೆ ಅವಕಾಶ ಮಾಡಿಕೊಡಬೇಕು ಎಂಬುದು ಮುಖ್ಯವಾದ ವಿಚಾರ. ಇದನ್ನು ಈಗಾಗಲೇ ತಾವು ಮಾಡಿದ್ದೀರಿ. ಆದ್ದರಿಂದ ಇದು ಮಂಗಳವಾರ ತೆಗೆದುಕೊಳ್ಳತಕ್ಕ ವಿಚಾರ. ಇದನ್ನು ಕಾಲಿಂಗ್ ಅಟೆನ್‌ಷನ್ ಎಂದು ತಾವು ಕನ್‌ಫರ್ಟ್ ಮಾಡಿದ್ದೀರಿ. ನಿಮಗೆ ಅಧಿಕಾರ ಇದೆ. ಅಧಿಕಾರ ಇಲ್ಲದೇಹೋದರೆ, ಸನ್ಮಾನ್ಯ ಸದಸ್ಯರು ಹೇಳತಕ್ಕ ಮಾತಿನಲ್ಲಿ ಅರ್ಥ ಇದೆ. ನಾನು ಆ ಅಧಿಕಾರ ತಮಗೆ ಇಲ್ಲ ಎಂದುಹೇ ಳುತ್ತಿಲ್ಲ. ನೀವು ತೀರ್ಮಾನ ಮಾಡಿರುವುದು ಸರಿಯಾಗಿ ಇಲ್ಲ, ಇಲ್ಲಿಯೇ ಮಾಡಬೇಕು ಇವತ್ತೇ ಪರಿಶೀಲನೆ ಮಾಡ ಬೇಕೆಂದು ಹೇಳಿದ್ದಾರೆ. ಆದರೆ ತಾವು ಈಗಾಗಲೇ ನಿರ್ಣಯವನ್ನು ಕೊಟ್ಟಿದ್ದೀರಿ. ಈ ನಿರ್ಣಯವನ್ನು ಒದಲಾಯಿಸತಕ್ಕಂಥ ಯಾವ ಒಂದು ಹೊಸ ವಿಚಾರವನ್ನೂ ಸನ್ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿಲ್ಲ. ಮತ್ತು ಇದಕ್ಕೆ ಪುಷ್ಟೀಕರಿಸತಕ್ಕಂಥ ರೀತಿಯಲ್ಲಿ ಅವರು ಯಾವ ವಾದವನ್ನೂ ಮಂಡಿಸಲಿಲ್ಲ. ಈ ಬಗ್ಗೆ ತಮ್ಮ ತೀರ್ಮಾನವೇ ಕೊನೆಯ ತೀರ್ಮಾನ. ಅವರಿಗೆ ಅವಕಾಶ ಮಾಡಿಕೊಡತಕ್ಕಂಥಾದ್ದು ಮುಖ್ಯ ವಾದುದು. ಸಾರಭೂತವಾದುದು. ನೀವು ಅವಕಾಶ ಮಾಡಿಕೊಟ್ಟಿರಲಿಲ್ಲ ಎಂದು ಹೇಳಿದ್ದರೆ ಅವರ ದೂರು ಆಥವಾ ವಾದ ಏನಿದೆ ಅದನ್ನು ಕೇಳುವುದಕ್ಕೆ ಅವಕಾಶ ಇರುತ್ತಿತ್ತು. ಆದರೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಅತೀತೀಕ್ಷ್ಣವಾಗಿ ಮಾಡಿಕೊಟ್ಟಿದ್ದೀರಿ. ಅವರು ಹೇಳಿದ ರೀತಿಯಲ್ಲೇ ಆಗಬೇಕೆಂಬ ಹಾಗೆ ಇಟ್ಟಿದ್ದಾರೆ. ಅವರ ವಾದಕ್ಕೆ ಮನ್ನಣೆ ಕೊಡತಕ್ಕಂಥಾದ್ದು ಆದರೆ, ಪ್ರಜಾಪ್ರಭುತ್ವದ ಮೂಲ ತತ್ವಕ್ಕೇ ಕೊಡಲಿ ಪೆಟ್ಟನ್ನು ಹಾಕಿದಹಾಗೆ ಆಗುತ್ತದೆ. ಅವಕ್ಕೆ ಧಿಕ್ಕಾರ ಮಾಡತಕ್ಕಂಥ ಮನೋಭಾವನೆಗೆ ಆಸ್ಪದ ಮಾಡಿಕೊಟ್ಟಹಾಗೆ ಆಗುತ್ತದೆ. ಆದ್ದರಿಂದ ಅವಕ್ಕೆ ತಾವು ಅವಕಾಶ ಮಾಡಿಕೊಡಬಾರದು ಎಂದು ತಮ್ಮಲ್ಲಿ ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಎಂ. ಎಸ್. ಕೃಷ್ಣನ್‌ರವರೇ, ತಾವು ಹೇಳಿರಿ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೀನಿ. ಅದನ್ನು ರೀಕನ್ಸಿಡರ್ ಮಾಡಿ ಎಂದು ಬಂಗಾರಪ್ಪನವರು ಹೇಳಿದ್ದಾರೆ. ನಾನು ಲಾ ಮಿನಿಸ್ಟರ್‌ರವರು ಹೇಳಿದ್ದನ್ನೂ ಕೇಳಿದ್ದೇನೆ. ತಮ್ಮ ಅಭಿಪ್ರಾಯವನ್ನೂ ಕೇಳುತ್ತೇನೆ. ಅವರ ಒಪೀನಿಯನ್ ಏನಿದೆ ಅದನ್ನೂ ಕೊಡಲಿ. I am not a dictator.

ಶ್ರೀ ಎಂ. ಎಸ್. ಕೃಷ್ಣನ್.—ನಿಯಮಾವಳಿಗಳಲ್ಲಿ ನಿಲುವಳಿ ಸೂಚನೆಯನ್ನು ಯಾವರೀತಿ ತರಬೇಕೆಂಬ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಲಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಡಿಕ್ಟೇಟೋರಿಯಲ್ ಟೋನ್‌ನಲ್ಲಿ I am not a dictator ಎಂದರೆ ಹೇಗೆ ?

ಅಧ್ಯಕ್ಷರು.—ನಿಮ್ಮ ಅಭಿಪ್ರಾಯ ಕೇಳಿಕೊಂಡು, ನಿಯಮ ನೋಡಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ನಿಲುವಳಿ ಸೂಚನೆ ತರುವುದಕ್ಕೆ ನಿಮ್ಮಲ್ಲಿ ಅನುಮತಿಯನ್ನು ಕೇಳಬೇಕು. ಪ್ರಿಲಿಮಿನರಿಯಾಗಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ರೂಲ್ ೬೩ ರಲ್ಲಿ ಹೇಳಿದೆ. ಅದರ ಪ್ರಕಾರ ಮೊದಲು ಮಂಡಿಸಿದ್ದಾರೆ. ಪ್ರಿಲಿಮಿನರಿ ಯಾಗಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಅದು ಆಮೇಲೆ ಆಯಿತು. ನಾನು ರೂಲಿಂಗ್ ಏನೂ ಕೊಡಲಿಲ್ಲ ಎಂದರೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಇತ್ತು. ನಾನು ಈಗಾಗಲೇ ನನ್ನ ಚೇಂಬರ್‌ನಲ್ಲಿ ಇದನ್ನು ಸಿ.ಎ.ಎನ್. ಆಗಿ ಕನ್‌ವರ್ಟ್ ಮಾಡಿ ಅವರಿಗೆ ಇಂಟಿಮೇಷನ್ ಕೊಟ್ಟಿದ್ದೇನೆ. ಸಿ.ಎ.ಎನ್. ಅನ್ನು ಮಂಗಳವಾರ ಇಟ್ಟಿದ್ದೇನೆ. ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. I have already given ruling. ಈ ಸ್ಟೇಜ್‌ನಲ್ಲಿ ನೀವು ಏನು ಹೇಳಬೇಕು ಹೇಳಿರಿ. ರೂಲಿಂಗ್ ಕೊಡದೇ ಇದ್ದರೆ, ನಿನ್ನೆ ಮೊನ್ನೆ ಬಂದಂಥವುಗಳನ್ನು ತೆಗೆದುಕೊಂಡಿದ್ದೇವಲ್ಲ ಆ ರೀತಿ ಆಗುತ್ತಿತ್ತು. I have rejected the adjournment motion in my chamber and converted into C.A.N. ಈಗ ಇದರ ಬಗ್ಗೆ ಹೇಳಿರಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೂಲ್‌ನಲ್ಲಿ ಕನ್‌ವರ್ಟ್ ಮಾಡುವುದಕ್ಕೆ ತಮಗೆ ಅಧಿಕಾರ ವ್ಯಾಪ್ತಿ ಇಲ್ಲ. ತಮಗಿರುವುದು ಏನು ಎಂದರೆ ಇದನ್ನು ತಿದ್ದುಪಡಿ ಮಾಡಬಹುದು. ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಬಹುದು. ರೂಲ್ ೮೮ರ ಪ್ರಕಾರ ಕನ್‌ವರ್ಟ್ ಮಾಡುವುದಕ್ಕೆ ತಮಗೆ ಅಧಿಕಾರ ಇದೆಯೋ ಇಲ್ಲವೋ ಎಂಬುದು ಸಂಶಯಾತ್ಮಕವಾದ ವಿಷಯ. ಅದನ್ನು ತಾವು ಪರಿಶೀಲನೆ ಮಾಡಬೇಕಾಗಿ ಬರುತ್ತದೆ. ಅಡ್‌ಜರ್ನ್‌ಮೆಂಟ್ ನೋಷನ್ ಅನ್ನು ಕನ್‌ವರ್ಟ್ ಮಾಡುವುದಕ್ಕೆ ನಮ್ಮ ರೂಲ್ಸ್‌ನಲ್ಲಿ ಎಲ್ಲಿ ಅವಕಾಶ ಇದೆ? ಅದು ಸ್ಪಷ್ಟವಾಗಿ ಇರಬೇಕು. ರೂಲ್ ೮೮ರ ಪ್ರಕಾರ ಇದನ್ನು ಕನ್‌ವರ್ಟ್ ಮಾಡುವುದಕ್ಕೆ ಬರುವುದಿಲ್ಲವೆಂದು ನನಗನ್ನಿಸುತ್ತದೆ.

ಅಧ್ಯಕ್ಷರು.—ಯಾವಾಗ ಕನ್‌ವರ್ಟ್ ಮಾಡಬಹುದು ಎಂದು ಪಾರ್ಲಿಮೆಂಟರಿ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್‌ನಲ್ಲಿ ಇದೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಈ ಮುಂದೆಯೇ ಈ ಮನೆಯಲ್ಲೇ ಇಂಥಾದ್ದು ಬೇಕಾದಷ್ಟು ನಡೆದಿದೆ. ತಾವೇ ಮಾಡಿರುತ್ತೀರಿ.

ಅಧ್ಯಕ್ಷರು.—ಕೌಲ್ ಅಂಡ್ ಶಕ್ಧರ್ ಪುಸ್ತಕದಲ್ಲಿ ಇದೆ. ಇದರಲ್ಲಿ ಅಡ್‌ಜರ್ನ್‌ಮೆಂಟ್ ಮೋಷನ್ ಅನ್ನು ಕನ್‌ವರ್ಟ್ ಮಾಡಿ ರೂಲ್ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡಬಹುದು ಎಂದು ಇದೆ. ಶಾರ್ಟ್ ನೋಟೀಸ್ ಕೊಶ್ಚನ್ ಆಗಿ ಪರಿವರ್ತನೆ ಮಾಡಬಹುದು, ಇಲ್ಲವೇ ಶಾರ್ಟ್‌ಟಪರ್ಮ್ ಡಿಸ್ಕಷನ್ ಆಗಿ ಪರಿವರ್ತನೆ ಮಾಡಬಹುದು, ಕಾಲಿಂಗ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಬಹುದು ಎಂದು ಇದರಲ್ಲಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ಪ್ರಕಾರ ತೆಗೆದುಕೊಂಡರೆ ಅದರಲ್ಲಿ ಇಲ್ಲ.

ಅಧ್ಯಕ್ಷರು.—ಲಾ ಮಿನಿಸ್ಟರ್‌ರವರೇ ನೀವು ನೋಡಿ ಹೇಳಿರಿ, ಎಲ್ಲಿದೆ ಎಂದು.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲದ್ದನ್ನು ಏನು ನೋಡುತ್ತಾರೆ. ನಿಯಮ ೨೯೪ ಓದಿರಿ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರು ೨೯೪ನೇ ನಿಯಮದ ಪ್ರಕಾರ ಪ್ರಸ್ತಾವನೆಯನ್ನು ನಿಯಮಗಳಿಗನುಗುಣವಾಗಿ ತಿದ್ದುಪಡಿ ಮಾಡಬಹುದು ಅಥವಾ ನಿರಾಕರಿಸಬಹುದು.

ಅಧ್ಯಕ್ಷರು.—ಶಕ್ಧರ್ ಅಂಡ್ ಕೌಲ್ ಪುಸ್ತಕದಲ್ಲಿ ಕ್ಲಿಯರ್‌ಕಟ್ ಇದೆ, ಬೇಕಾದರೆ ತೋರಿಸಿ ಎಂದರೆ ತೋರಿಸುತ್ತೇನೆ, ಶಕ್ಧರ್ ಅಂಡ್ ಕೌಲ್‌ನಲ್ಲಿ ಪುಸ್ತಕದಲ್ಲಿ ಈ ರೀತಿ ಮಾಡಬಹುದು ಎಂದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೌಲ್ ಅಂಡ್ ಶಕ್ಧರ್‌ನಲ್ಲಿ ಮಾಡಬಹುದು ಎಂದು ಇದೆ. ಆದರೆ ನಮ್ಮ ರೂಲ್ ಪ್ರಕಾರ ಮಾಡಬಾರದು ಎಂದು ಇದ್ದರೆ ನಾವು ತಿದ್ದುಪಡಿಗಾಗಬೇಕಾಗುತ್ತದೆ. ಲೋಕಸಭೆಯಲ್ಲಿ ಮಾಡಿದ್ದರೂ, ನಮ್ಮ ರೂಲ್ಸ್‌ನಲ್ಲಿ ಇಲ್ಲ ಎಂದರೆ, ನಮ್ಮ ರೂಲ್ಸ್ ಪ್ರಕಾರವೇ ಮಾಡಬೇಕಾಗುತ್ತದೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮಗೆ ನಿರಾಕರಿಸಲು ನಮ್ಮ ರೂಲ್‌ನಲ್ಲಿ ಅವಕಾಶ ಇದೆ. ಆದರೆ ಇದು ಬಹಳ ಮಹತ್ತರವಾದ ವಿಷಯ. ನಿಲುವಳಿ ಸೂಚನೆಯಾಗಿ ಇದರ ಚರ್ಚೆಗೆ ಅವಕಾಶ ಮಾಡಿಕೊಡಿ. ನಮ್ಮ ನಿಯಮಾವಳಿಗಳಲ್ಲೇ ತಮಗೆ ಅಧಿಕಾರ ಇದೆ ಎನ್ನುವುದಕ್ಕೆ ಒಂದು ಪಾಯಿಂಟ್ ಹೇಳುತ್ತೇನೆ.

ಅಧ್ಯಕ್ಷರು.—ಕೌಲ್ ಆಂಡ್ ಶಕ್ದರ್ ಪುಸ್ತಕದಲ್ಲಿ ಇದೆ. ಕನ್‌ವರ್ಟ್ ಮಾಡಬಹುದು ಎಂದು ಕ್ಲಿಯರ್ ಕಟ್ ಆಗಿ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ನಿಯಮಾವಳಿಗಳಲ್ಲೇ ಇದೆ. ಪೇಜ್ ೨೩೯ ರಲ್ಲಿ ಒಂದು ನಿಯಮ ಇದೆ

ಅಧ್ಯಕ್ಷರು.—ಪುಸ್ತಕದಲ್ಲಿ ಇದೆ. ಆದರಂತೆ ನಾನು ಕನ್‌ವರ್ಟ್ ಮಾಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಪುಟ ೨೩೯ ರಲ್ಲಿ ೬೦ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆ ನೀಡಲು ನಿರಾಕರಿಸಿದರೆ ಅಥವಾ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮ ಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ ತಾನು ಅವಶ್ಯಕವೆಂದು ಭಾವಿಸಿದರೆ ನಿಲುವಳಿ ಸೂಚನೆಯನ್ನು ಓದಿ ಹೇಳಬಹುದು. ಇಲ್ಲಿ ಒಂದು ಪದ ಇದೆ ಅವಶ್ಯಕವೆಂದು ಭಾವಿಸಿದರೆ ಅವಕಾಶ ಕೊಡ ಬಹುದು. ಇದು ಬಹಳ ಪ್ರಾಮುಖ್ಯವಾದ ವಿಷಯವಾಗಿರುವುದರಿಂದ ತಾವು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಹುದು. ನನ್ನ ಒಂದು ಪ್ರಶ್ನೆ ಏನೆಂದರೆ, ಈ ರಾಜ್ಯದಲ್ಲಿ ಇಬ್ಬರು ದಲಿತರ ಬೆತ್ತಲೆ ಮೆರವಣಿಗೆಯಾದಂಥ ಸಂದರ್ಭದಲ್ಲಿ ನಾನು ಇಲ್ಲಿ ನಿಲುವಳಿ ಸೂಚನೆಯನ್ನು ತಂದೆ. ಆಗ ನನಗೆ ತಾವುಗಳು ಸ್ವಲ್ಪ ಸಹಕಾರ ಕೊಟ್ಟಿದ್ದರೆ ಆಗ ಈ ಸರ್ಕಾರ ಬೆತ್ತಲೆಯಾಗುತ್ತಿತ್ತು. ಸರ್ಕಾರ ನನಗೆ ಅವಕಾಶ ಕೊಡಲಿಲ್ಲ. ನಮ್ಮ ಸ್ನೇಹಿತರು ಸಹ ನನಗೆ ಸಹಕಾರ ಕೊಡಲಿಲ್ಲ. ಇದರ ನಿಗೂಢ ಏನು ಎನ್ನುವುದು ನನಗೆ ಅರ್ಥವಾಗಲಿಲ್ಲ. ನಾನು ಒಬ್ಬನೇ ಇದ್ದೆ. ಬಹುಶಃ ನನ್ನ ಜೊತೆ ಇಲ್ಲಿ ಯಾರೂ ಇಲ್ಲ. ಆಗ ಮಾನ್ಯ ಅಧ್ಯಕ್ಷರು ಸಹ ನನ್ನ ರಕ್ಷಣೆಗೆ ಬರಲಿಲ್ಲ. ಬೇರೆ ಯಾರೂ ಸಹ ಬರಲಿಲ್ಲ. ಆ ಮುಗ್ಧ ಜನರ ಬೆತ್ತಲೆ ಆಗಿ ಹೋಯಿತು.....

ಶ್ರೀ ಪಂಪಾಪತಿ.— ನೀವೊಬ್ಬರೆ ಅಲ್ಲ, ನಾವು ಆ ಬಗ್ಗೆ ಮಾತನಾಡಿದ್ದೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಈಗ ಏನು ಹೇಳಬೇಕೋ ಅದನ್ನು ಹೇಳಿ. ಅದು ಬಿಟ್ಟು ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಪಂಪಾಪತಿ.- ನಿಮ್ಮಂತೆ ನಾವು ಸಹ ಹೋರಾಟ ಮಾಡಿದ್ದೇವೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಈ ರಾಜ್ಯದ ದಲಿತರಿಬ್ಬರ ಬೆತ್ತಲೆ ಮೆರವಣಿಗೆ ಆದಾಗ ಯಾರೂ ಸಹ ನನ್ನ ಸಹಕಾರಕ್ಕೆ ಬರಲಿಲ್ಲ. ಅದು ಬಿಟ್ಟು ಈಗ ಯಾವುದೋ ಒಂದು ಎಂ ಡಿ. ಸೀಟ್. ಬಗ್ಗೆ ಹೋರಾಟ ಮಾಡುತ್ತಿದ್ದಾರೆ.....

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್. ಮಾನ್ಯ ಅಧ್ಯಕ್ಷರೇ.....

ಶ್ರೀ ಪಂಪಾಪತಿ. ನಾವು ಯಾರೂ ಮಾತನಾಡಲಿಲ್ಲವೆಂದು ತಾವು ಹೇಳುವುದು ಸರಿಯಲ್ಲ.

ಅಧ್ಯಕ್ಷರು. ಪೇಜ್ ೪೩೫ ಕೌಲ್ ಆಂಡ್ ಶಕ್ದರ್‌ನಲ್ಲಿ ಕ್ಲಿಯರ್ ಆಗಿ ಇದೆ.

> "In an appropriate case, the Speaker may admit a calling attention notice in lieu of the notice of an adjournment motion either on the same day or on a subsequent day depending upon the nature and urgency of the matter sought to be raised."

ಅದಕ್ಕೆ ನಾವು ಹಿಂದೆ ಇಂತಹದ್ದನ್ನು ಮಾಡಿದ್ದೇವೆ. ನಾನೀಗ ಇದನ್ನು ಗಮನ ಸೆಳೆಯುವ ಸೂಚನೆಗೆ ಕನ್‌ವರ್ಟ್ ಮಾಡಿದ್ದೇನೆ. ಇದು ಪಾರ್ಲಿಮೆಂಟ್‌ರಿ ಪ್ರಾಕ್ಟೀಸ್‌ನಲ್ಲೂ ಸಹ ಇದೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾವೂ ಓದಿದ್ದೇವೆ. ಅದನ್ನೇ ೨೦ ವರ್ಷಗಳಿಂದ ಓದುತ್ತಿದ್ದೇವೆ.

ಅಧ್ಯಕ್ಷರು. ಅದರಲ್ಲಿ ಕ್ಲಿಯರ್ ಆಗಿ ಇದೆ. ಅದನ್ನು ನಾನು ಬೇಕೆಂದರೆ ಓದುತ್ತೇನೆ. I have converted. As per rules, conventions and parliamentary practice, I have converted it and I have kept it for Tuesday.

ಶ್ರೀ ಎಸ್. ಬಂಗಾರಪ್ಪ.—ಯಾರು ನೋಟಿಸ್ ಕಳುಹಿಸಿರುತ್ತಾರೆ, ಅವರು ಒಪ್ಪಿಗೆ ಕೊಟ್ಟರೆ ಕನ್‌ವರ್ಟ್ ಮಾಡಬಹುದು. ತಾವು ಸುಮ್ಮನೆ ತಮ್ಮ ಛೇಂಬರ್‌ನಲ್ಲಿ ಕುಳಿತು ಕನ್‌ವರ್ಟ್ ಮಾಡುವುದು ತಪ್ಪು. ಆ ಪದ್ಧತಿ ಬೇಡವೆಂದು ನಾವು ಹೇಳುವುದು. ಆ ಅಧಿಕಾರ ತಮಗೆ ಎಲ್ಲಿದೆ ? ಹಿಂದೆ ತಾವು ಏತಕ್ಕೆ ಆರೀತಿ ಮಾಡಿದಿರಿ. ಹಾಗೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕೌಲ್ ಅಂಡ್ ಶಕ್ಧರ್ ಪ್ರಕಾರ ತಾವು ನೋಡಿದರೆ ಅ ರಲ್ಲಿ ಇರುವುದೇನೆಂದರೆ:—

> " In an appropriate case, the Speaker may admit a calling attention notice in lieu of the notice of an adjournment motion either on the same day or on a subsequent day depending upon the nature and urgency of the matter sought to be raised. "

supposing an adjournment motion has been raised, you are bound to hear the preliminary submission. you have also a right to request the Member and say, "No. I am not prepared to agree and accept this adjournment motion but I am prepared to accept a calling attention motion, provided you are agreeable." Then the Member is required to submit a regular notice of the calling attention under the rules, a copy of which is to be made available to the Minister concernd in order to enable him to make a statement in response to it. So, the member must again give a calling attention notice. whether you have the right to convert the whole thing is the question. According to this, you have no right to convert. That is my submission. you have a right to say to the Member, " I am not prepared to admit this adjournment motion. If you are interested, I am also interested to see that some democratic procedure is followed; if you are prepared to agree to a calling attention motion, you give." Then if there is some indication, the Member must give another notice and then only it can be included as calling attention motion. whether you have a right to *suo moto* convert it into a calling attention, unfortunately it is not there according to my submission and even according to kaul & Shakhdhar.

ಅಧ್ಯಕ್ಷರು.—ಇನ್ನೂ ಒಂದು ಅಂಶ ಇದೆ. ಏನೆಂದರೆ ಜನರಲ್ ಡಿಸ್ಕಷನ್ ಬಜೆಟ್ ಮೇಲೆ ಇತ್ತು ಎಂದರೆ ಆಡ್ಜಿಟ್ ಮಾಡಬಾರದೆಂದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಒಳ್ಳೆಯ ದೃಷ್ಟಿಯಿಂದ ಮಾಡಿದ್ದೀರಿ. ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. I am not questioning your *bonafides*. ನಿಮ್ಮ ಬೋನೋ ಫೈಡ್ ಬಗ್ಗೆ ನಾನು ಕ್ವೆಶ್ಚನ್ ಮಾಡುತ್ತಿಲ್ಲ.

ಅಧ್ಯಕ್ಷರು.—ಅಸೆಂಬ್ಲಿಯಲ್ಲಿ ಡಿಮ್ಯಾಂಡ್ ಮೇಲೆ ಡಿಸ್ಕಷನ್ ಇದ್ದಾಗ, ಜನರಲ್ ಡಿಸ್ಕಷನ್ ಬಜೆಟ್ ಮೇಲೆ ಇದ್ದಂಥ ಸಂದರ್ಭದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳಬಾರದೆಂದು ಇದೆ. ಇದೆಯೋ ಇಲ್ಲವೊ? ಆದ್ದರಿಂದ ಇದನ್ನು ನಾನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೇನೆ. ಬಜೆಟ್ ಮೇಲೆ ಜನರಲ್ ಡಿಸ್ಕಷನ್ ಬಂದಾಗ ಕೂಡ ತಾವು ಇದನ್ನು ಹೇಳಬಹುದು.

SRI M. S. KRISHNAN.—That is another issue. ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಹೇಳುವುದಿಷ್ಟೆ,

ಅಧ್ಯಕ್ಷರು.—ಈ ವಿಷಯವನ್ನು ಜನರಲ್ ಬಜೆಟ್ ಡಿಸ್ಕಷನ್ ನಡೆದಾಗ, ಕೂಡ ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಒಂದು ನಿಮಿಷ ಅವಕಾಶ ಕೊಡಿ. ಮಂಗಿಸಿಬಿಡುತ್ತೇನೆ. ಯಾವುದಾದರೂ ಒಂದು ಪ್ರಶ್ನೆ ಬಂದಾಗ, ಬಜೆಟ್‌ನ ಮೇಲೆ ಜನರಲ್ ಡಿಸ್ಕಷನ್ ಮಾಡುವಾಗ ನಾವು ಮಾತನಾಡಬಹುದು. ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಪ್ರಶ್ನೆ ಏನು ಎಂದರೆ, ನಿಮ್ಮ ಬೋನೋಫೈಡ್‌ನ್ನು ನಾನು ಕ್ವೆಶ್ಚನ್ ಮಾಡುತ್ತಿಲ್ಲ. ಹಕ್ಕುಗಳನ್ನು ನಾವು ನಮ್ಮ ಇತಿಮಿತಿಯೊಳಗೆ ನೋಡಬೇಕಾಗುತ್ತದೆ. ಇದರ ಪ್ರಕಾರ ನಿಲುವಳಿ ಸೂಚನೆಯನ್ನು ಯಾರು ಕಳುಹಿಸಿದ್ದಾರೆ. ಏಕೆ ಕಳುಹಿಸಿದ್ದಾರೆಂದು ತಾವು ನೋಡಿದ ಮೇಲೆ ಅದನ್ನು ಒಪ್ಪಿಕೊಳ್ಳುವ ಅಧಿಕಾರ ತಮಗಿದೆ. ಒಪ್ಪಿಕೊಳ್ಳದೇ ಇರತಕ್ಕ ಅಧಿಕಾರವೂ ತಮಗೇ ಇದೆ. ಅದನ್ನು ಒಪ್ಪಿಕೊಳ್ಳಬೇಕೋ, ಒಪ್ಪಿಕೊಳ್ಳಕೂಡದೋ ಎನ್ನುವ ಬಗ್ಗೆ ತೀರ್ಮಾನ ಮಾಡುವುದಕ್ಕಿಂತ ಮುಂಚಿ ಸಂಬಂಧಪಟ್ಟ ಸದಸ್ಯರುಗಳಿಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಿಯಮ ಇದೆ. ಇನ್ನು ಎರಡನೆಯದು, ನಾನು ಈ ನಿಲುವಳಿ ಸೂಚನೆ ಬಗ್ಗೆ ನೋಡಿದ್ದೇನೆ. ಇದು ನಿಲುವಳಿ ಸೂಚನೆಯಾಗುವುದಿಲ್ಲವಾದ್ದರಿಂದ ಕಾಲಿಂಗ್ ಅಟೆನ್‌ಷನ್‌ಗೆ ನೋಟೀಸ್ ಕಳುಹಿಸಿಕೊಟ್ಟರೆ ಅದನ್ನು ಯೋಚನೆ ಮಾಡಬಹುದೆಂದು ಸದಸ್ಯರುಗಳಿಗೆ ತಿಳಿಸಬಹುದು. ಅದು ಬಿಟ್ಟು ನೀವೇ ಸುಮ್ಮೋಮ್ಮೋಜೋ ಆಗಿ ನಿಲುವಳಿ ಸೂಚನೆಗಳನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡುವುದಕ್ಕೆ ಬರುತ್ತದೆಯೇ ಎನ್ನುವುದೇ ಈ ಪ್ರಶ್ನೆ.

ಅಧ್ಯಕ್ಷರು.—ನನಗೆ ಸುಮ್ಮೋಮ್ಮೋಜೋ ಆಗಿ ಕನ್‌ವರ್ಟ್ ಮಾಡುವುದಕ್ಕೆ ಅಧಿಕಾರ ಇದೆ.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ಈ ಮನೆಯಲ್ಲಿ ಮಾನ್ಯ ಸದಸ್ಯರುಗಳು ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಹೇಳಿ ಬರವಣಿಗೆ ಮೂಲಕ ತಮ್ಮನ್ನು ಪ್ರಾರ್ಥನೆ ಮಾಡಿಕೊಂಡ ಮೇಲೆ, ಅದು ತಮಗೆ ಸರಿಯಲ್ಲ ಎನಿಸಿದರೆ, ಸಂಬಂಧಪಟ್ಟ ಸದಸ್ಯರುಗಳಿಗೆ ಕೇಳದೆಯೇ ನಿರಾಕರಿಸಿರತಕ್ಕಂಥ ಉದಾಹರಣೆಗಳು ಇವೆ. ಹಿಂದೆ ನಡೆದ ಸಭೆಗಳಲ್ಲೂ ಈ ಉದಾಹರಣೆಗಳು ಇವೆ. ಈಗಲೂ ಇವೆ. ಇದು ಅನುಚಾನವಾಗಿ ನಡೆದುಕೊಂಡು ಬಂದಿರುವ ವಿಚಾರ. ಪಬ್ಲಿಕ್ ಇಂಟರೆಸ್ಟ್ ಪ್ರಕಾರ ಮಾನ್ಯ ಸದಸ್ಯರುಗಳಿಗೆ ವಿಷಯವನ್ನು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ತಮಗೆ ಅಧಿಕಾರ ಇದೆ. .ಯಾವರೂಪದಲ್ಲಿ ಈ ವಿಷಯವನ್ನು ತರಬೇಕು ಎನ್ನುವುದರ ಬಗ್ಗೆ ಅಂತಿಮ ತೀರ್ಮಾನ ತೊಡತಕ್ಕಂಥ ಅಧಿಕಾರ ಸನ್ಮಾನ್ಯ ಅಧ್ಯಕ್ಷರಿಗೆ ಇದೆ. ಲೋಕಸಭೆಯಲ್ಲೂ ಇಂಥ ವಿಷಯಗಳ ಬಗ್ಗೆ ಯಾರನ್ನೂ ಕೇಳುವುದಿಲ್ಲ. ಎಲ್ಲಾ ವಿಷಯವನ್ನೂ ಅಧ್ಯಕ್ಷರ ಚೇಂಬರ್‌ನಲ್ಲೇ ತೀರ್ಮಾನ ಮಾಡಿರುವುದನ್ನು ನಾವು ಅನೇಕ ಸಲ ಪತ್ರಿಕೆಗಳಲ್ಲೂ ಓದಿದ್ದೇವೆ. ನಾವೂ ಸಹ ಅಲ್ಲಿ ನಡೆದಿರುವ ವಿಷಯಗಳನ್ನೂ ನೋಡಿದ್ದೇವೆ. ಆದ್ದರಿಂದ ಇದನ್ನು ಹೊಸದಾಗಿ ಅಧ್ಯಕ್ಷರು ಮಾಡಿದ್ದಾರೆ ಸಮ್ಮನ್ನು ಕೇಳದೇ ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲ. The rule known as 'audi alteram partem' is not applicable to a situation like this. ಈ ರೀತಿ ಪಾರ್ಲಿಮೆಂಟಿನಲ್ಲೂ ನಡೆದ ಉದಾಹರಣೆಗಳು ಇವೆ. ಅವರಿಗೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನೇ ಕೂಡದೆ ಇದ್ದಾಗ ಅವರು ಕೇಳತಕ್ಕಂತಪದ್ದು ಸರಿ. ಇವತ್ತು ಆಪ ಮೇಲೆ ಪುನಃ ಸೋಮವಾರ ಸದನ ಸೇರುತ್ತದೆ. ಈ ವಿಷಯವನ್ನು ಮಂಗಳವಾರ ತೆಗೆದುಕೊಳ್ಳೋಣ. ಸೋಮವಾರ ಬಜೆಟ್ ಭಾಷಣಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ ಇದೆ. ಜೊತೆಗೆ ಒಂದು ಬಿಲ್ ಪಾಸ್ ಮಾಡಬೇಕಾಗಿದೆ. ಆದ್ದರಿಂದ, ಈ ವಿಷಯ ಮಂಗಳವಾರ ಬರಲಿ. ಈ ದಿನ ಸರ್ಕಾರದ ಕಾರ್ಯಕಲಾಪಗಳು ಸರಿಯಾಗಿ ನಡೆಯುವಂತೆ ಮಾನ್ಯ ಸದಸ್ಯರುಗಳು ಸಹಕಾರ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಮಂಗಳವಾರ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸದಸ್ಯರು ಅವಕಾಶ ಮಾಡಿಕೊಡಬಹುದೆಂದು ಪುನಃ ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

12-00 noon

ಇನ್ನೊಂದು ಸಲಹೆ ಏನೆಂದರೆ, ಇದನ್ನು ಸೋಮವಾರ ಸಭೆಯ ಕಾರ್ಯಕಲಾಪಗಳು ಮುಗಿದ ನಂತರ ಬೇಕಾದರೆ ತೆಗೆದುಕೊಳ್ಳಬಹುದು. ಇದನ್ನು ಅಧ್ಯಕ್ಷರ ಜಡ್ಜ್‌ಮೆಂಟ್‌ಗೇ ಬಿಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಯಾವ ರೂಪದಲ್ಲಿ ?

ಶ್ರೀ ಎ. ಲಕ್ಷ್ಮೀಸಾಗರ್.—ಕಾಲಿಂಗ್ ಅಟೆನ್‌ಷನ್ ರೂಪದಲ್ಲಿ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರಾದ ತಾವು ಸರ್ಕಾರದ ಪರವಾಗಿಯಾಗಲೀ ವಿರೋಧ ವಾಗಿ ಯಾಗಲ್ಲೀ ಪಾತನಾಡುವ ಸ್ವಭಾವ ಹೊಸ್ಮದಲ್ಲ. ಇಲ್ಲಿ ನಿಷ್ಪಕ್ಷಪಾತವಾಗಿ ತಾವು ಕೆಲಸ ಮಾಡ ಬೇಕಾಗುತ್ತದೆ ಮತ್ತು ಮಾಡುತ್ತಿದ್ದೀರಿ. ನಿನ್ನೆ ದಿವಸ ಇದೇ ವಿಷಯ ಮೇಲ್ಮನೆಯಲ್ಲಿ ಚರ್ಚೆಯಾಗಿ, ಧರಣಿಯಾಗಿ ಆ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದು, ಇವತ್ತು ಬೆಳಿಗ್ಗೆ ಕಾಂಗ್ರೆಸ್ ಪಕ್ಷದವರನ್ನು ಸಸ್ಪೆಂಡ್ ಕೂಡ ಮಾಡಲಾಗಿದೆ. ಆ ಹಿನ್ನೆಲೆಯಲ್ಲಿ ವಿಷಯವನ್ನು ಇಲ್ಲಿ ನಾವು ತಂದಿದ್ದೇವೆ. ತಾವು ಕಾಲಿಂಗ್ ಅಟೆನ್‌ಷನ್‌ಗೆ ಕನ್‌ವರ್ಟ್ ಮಾಡಿರುವ ಬಗ್ಗೆ ಹೇಳಿದಾಗ ಬಂಗಾರಪ್ಪನವರು ಅದು ಸರಿಯೇ ತಪ್ಪೇ ಎಂದು ಹೇಳಿದರು, ಆಗ ತಾವು ಕೃಷ್ಣನ್‌ರವರ ಸಲಹೆ ಕೇಳಿದಿರಿ.

ಅಧ್ಯಕ್ಷರು.—ಇದನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ತೆಗೆದುಕೊಳ್ಳಲು ಶೀರ್ಮಾನಿಸ ಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು, ತಾವು ಕೃಷ್ಣನ್‌ರವರಿಗೆ ಸಲಹೆ ಕೊಡಿ ಎಂದು ಕೇಳಿದಾಗ ಅಜರ್ನ್‌ಮೆಂಟ್ ಮೋಷನನ್ನು ಕಾಲಿಂಗ್ ಅಟೆನ್‌ಷನ್ನಾಗಿ ಕನ್‌ವರ್ಟ್ ಮಾಡಲು ತಮಗೆ ಅಧಿಕಾರ ಇಲ್ಲವೆಂದು ಹೇಳಿದರು. ರೂಲ್ ೨೯ರ ಪ್ರಕಾರ ''ಅಧ್ಯಕ್ಷರು ಪ್ರಸ್ತಾಪವನ್ನು ತಿರಸ್ಕರಿಸ ಬಹುದು ಅಥವಾ ನಿರಾಕರಿಸಬಹುದು'' ಎಂದು ಇದೆ. ತಾವು ನಿರಾಕರಿಸಿದರೆ ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ನಾವು ನೀವು ಒಪ್ಪಿಕೊಂಡಲ್ಲಿ ಪ್ರಿವಿಲಿಜಸ್ ಕಮಿಟಿಗೆ ಅವಕಾಶ ಕೊಡಬೇಕೆಂದು ವಾದ ಮಾಡುತ್ತಿದ್ದೇವೆ. ಆದರೆ ತಾವು ಅದನ್ನು ಕಾಲಿಂಗ್ ಅಟೆಂಷನ್ನಾಗಿ ಕನ್‌ವರ್ಟ್ ಮಾಡಿದು ನಮಗೆ ತೃಪ್ತಿ ತಂದಿಲ್ಲ. ಆದಕ್ಕೆ ತಮಗೆ ಅಧಿಕಾರವಿಲ್ಲವೆಂದು ಕೃಷ್ಣನ್‌ರವರು ವಾದಿಸುತ್ತಿದ್ದಾರೆ ಕೌಲ್ ಅಂಡ್ ಶಕ್ದರ್ ಪುಸ್ತಕದ ಪ್ರಕಾರ ಕೂಡ ತಮಗೆ ಅಧಿಕಾರವಿಲ್ಲವೆಂದು ಹೇಳಬಹುದು.

ಅಧ್ಯಕ್ಷರು.—ಆಯಿತು, ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿರುವುದನ್ನು ಓದಿರಿ.

SRI B. BASAVALINGAPPA.—''In an appropriate case...'' This is an appropriate case. ''The Speaker may admit a calling attention notice'' It is not a calling attention notice. It is an adjournment motion.

ಅಧ್ಯಕ್ಷರು.—ನಿನ್ನೆ ಮೊನ್ನೆ ಇದೇ ಸದನದಲ್ಲೇ ನಾವು ಕೆಲವು ಅಡ್ಜರ್ನ್‌ಮೆಂಟ್ ಮೋಷನ್ ಗಳನ್ನು ಕಾಲಿಂಗ್ ಅಟೆನ್‌ಷನ್‌ನ್ನಾಗಿ ಕನ್‌ವರ್ಟ್ ಮಾಡಿದ್ದೀವಲ್ಲಿ? ಇದು ಸೀನಿಯರ್ ಮೆಂಬರ್ ಮತ್ತು ಲಾಯರ್ ಆದ ತಮಗೆ ಗೊತ್ತಿಲ್ಲವೇ ? ಇದೇನೂ ಹೊಸತಲ್ಲ. ನಾರಾಯಣರಾವ್ ಕೊಟ್ಟಿದ್ದನ್ನು ಸಹ ಮಾಡಿದ್ದೇವೆ, ವೆಂಕಟರಾಮಯ್ಯನವರದ್ದು ಮಾಡಿದ್ದೇವೆ.

SRI B. BASAVALINGAPPA.—''...in lieu of the notice of an adjournment motion''. You are mixing up both.

MR. SPEAKER.—Continue to read:

SRI B. BASAVALINGAPPA.—''...either on the same day or on a subsequent day''. That is your discretion, depending upon the nature and urgency of the matter. When you had converted before., the House did not oppose and now we are opposing.

ಅಧ್ಯಕ್ಷರು.—ನೀವೆಲ್ಲ ಲೀಡರ್ಸ್ ಇದ್ದೀರಿ. ನಿಮ್ಮ ಸಲಹೆ ಕೇಳುತ್ತೇನೆ. ಆದರೆ ಟ್ವಿಸ್ಟ್ ಮಾಡುವುದು ಬೇಡ. ಚೇರನ್ನು ಮಿಸ್‌ಗೈಡ್ ಮಾಡುವುದು ಬೇಡ. ಇಂತಹ ಸಾವಿರಾರು ಕೇಸ್‌ಗಳನ್ನು ಕನ್‌ವರ್ಟ್ ಮಾಡಿದ್ದಿದೆ. ಇನ್ನೂ ಬೇಕಾದರೆ, ಇದು ಅರ್ಜೆಂಟ್ ಮ್ಯಾಟರಿದೆ, ಆದಕ್ಕೆ ಪ್ರಿವಿಲಿಜನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ ಎಂದು ಕೇಳಿ. ನೋಡೋಣ. ಇವತ್ತಾಗದಿದ್ದರೆ ನಾಳೆ ನಾಡದ್ದಾದರೂ ನೋಡೋಣ. ಬದಲಿಗೆ ಟ್ವಿಸ್ಟ್ ಮಾಡಿ ಮಿಸ್‌ಗೈಡ್ ಮಾಡಲು ಬರಬೇಡ.

(ಸಭೆಯಲ್ಲಿ ನಗು)

ಶ್ರೀ ಬಿ. ಬಸವಲಿಂಗಪ್ಪ.—ಮೊನ್ನೆ ತಾವು ನನ್ನನ್ನು ಕೇಳಿದಿರಿ, ನೀವು ಆಸ್ಟ್ರೇಲಿಯಾ ಕಾಮನ್‌ವೆಲ್ತ್ ಕಂಟ್ರಿಗಳಿಗೆಲ್ಲ ಹೋಗಿಬಂದಿರಿ, ಇಲ್ಲಿ ನಾನು ಸಭೆ ನಡೆಸುವುದು ಹೇಗೆನಿಸುತ್ತದೆ ಎಂದು; ಅದಕ್ಕೆ ನಾನು ಹೇಳಿದೆ, ಕೆಲವು ಸರಿ ಇದೆ, ಇನ್ನು ಕೆಲವು ತಪ್ಪು ಇದೆ ಎಂದು. ನೀವು ಎತ್ತರದಲ್ಲಿದ್ದೀರಿ ತಾವು ತಪ್ಪು ಮಾಡಬಾರದು.

ಅಧ್ಯಕ್ಷರು.—ಹಾಗಾದರೆ ನಿನ್ನೆ ಮೊನ್ನೆ ಏಕೆ ಅಬ್ಜೆಕ್ಷನ್ ಮಾಡಲಿಲ್ಲ? ಇಂತಹ ಸಾವಿರಾರು ಪ್ರಕರಣಗಳ ಮೇಲೆ ಗವರ್ನಮೆಂಟಿನವರು ಉತ್ತರ ಕೊಟ್ಟಿದ್ದಾರೆ. ನೀವೂ ಕೇಳಿದ್ದೀರಿ. ಆದಕ್ಕೆ ನಾನು ಕೇಳುವುದು, ನಿಮಗೆ ಪ್ರಿವಿಲಿಜನರಿ ಸಬ್‌ಮಿಷನ್‌ಗೆ ಅವಕಾಶ ಬೇಕಾದರೆ ಕೇಳಿ, ಕೊಡೋಣ.

ಶ್ರೀ ಸಿ. ಭೈರೇಗೌಡ.—ನಿನ್ನೆ ಮೊನ್ನೆಯಲ್ಲ ನಾವು ಕೊಟ್ಟ ನಿಲುವಳಿ ಸೂಚನೆಗಳನ್ನು ಕಾಲಿಂಗಟೆನ್‌ಷನ್ನಾಗಿ ಕನ್‌ವರ್ಟ್ ಮಾಡಲಾಗಿದೆ ಎಂದು ಹೇಳುತ್ತಿದ್ದೀರಿ, ಅದು ಸರಿಯಲ್ಲ. ಎಲ್ಲ ಕಾಯಿಲೆಗೂ ಒಂದೇ ಔಷಧ ಕೊಡುವುದಕ್ಕಾಗುವುದಿಲ್ಲ. ಯಾವುದಕ್ಕೆ ಏನು ಔಷಧ ಕೊಡಬೇಕೋ ಅದನ್ನೇ ಕೊಡಬೇಕು. ತಲೆನೋವಿಗೆ ಹೊಟ್ಟೆನೋವಿನ ಔಷಧಿ, ನೆಗಡಿಗೆ ಕಾಲುನೋವಿನ ಔಷಧಿ ಕೊಟ್ಟರೆ ಸರಿಹೊಂದೊಲ್ಲ. ಆ ರೀತಿ ಇವತ್ತಿನ ಕೇಸೆ ಬೇರೆ.

ಶ್ರೀ ಎಂ. ಪಿ. ಪ್ರಕಾಶ್.—ಈ ವಿಷಯದಲ್ಲಿ ಅಧ್ಯಕ್ಷರಿಗೆ ಅಧಿಕಾರವಿದೆ, ಆ ಪ್ರಕಾರ ಅವರು ನಿನ್ನೆ ಮೊನ್ನೆ ಕೂಡ ಮಾಡಿದ್ದಾರೆ. ಇದರ ಬಗ್ಗೆ ಭೈರೇಗೌಡರು ಏನೂ ಹೇಳುವುದು ಬೇಡ. ಇದೇ ತರಹ ನಿನ್ನೆ ಮೊನ್ನೆಯಿಲ್ಲ ಮಾಡಿರುವುದರಿಂದ ಇವತ್ತು ಮಾಡುವುದಕ್ಕೆ ವ್ಯತ್ಯಾಸ ಎಲ್ಲಿದೆ? ಭೈರೇಗೌಡರದು ಎಲ್ಲ ವಿಚಾರದಲ್ಲೂ ಒಂದೇ ಧಾಟಿನೇ ಇರುತ್ತದೆ.

ಶ್ರೀ ಸಿ. ಭೈರೇಗೌಡ,—ಇವೊತ್ತಿನ ಪ್ರಸ್ತಾಪವೇ ಬೇರೆ, ನಿನ್ನೆಯ ಪ್ರಸ್ತಾಪವೇ ಬೇರೆ.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಕೊಟ್ಟ ಉದಾಹರಣೆ ಎಲ್ಲಿದೆ, ಹೇಳಿರಿ? ಆಮೇಲೆ ಅದನ್ನು ಕಾಲಿಂಗಟೆನ್‌ಷನ್ನಾಗಿ ಕನ್‌ವರ್ಟ್ ಮಾಡಿರುವ ಉದಾಹರಣೆ ಇದೆಯೋ ಇಲ್ಲವೋ ಹೇಳಿ. ಈಗ ನೀವು ಪ್ರಿವಿಲಿಜನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ ಎಂದು ಕೇಳಿ, ಇಲ್ಲ ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿ. I have been going according to the convention. ಆಮೇಲೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ ೬೫ರ ಪ್ರಕಾರ ಒಂದು ಇಲ್ಲಿ ಪ್ರಶ್ನೆ ಬರುತ್ತದೆ. ಏನೆಂದರೆ,

> ''೬೫ (೧) ಅಧ್ಯಕ್ಷರು, ೬೦ನೇ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆಯೆಂದು ಅಭಿಪ್ರಾಯಪಟ್ಟರೆ ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರ ವಿಷಯಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯನ ಹೆಸರನ್ನು ಕರೆಯಬೇಕು. ಅಂಥ ಸದಸ್ಯನು ತನ್ನ ಸ್ಥಾನದಲ್ಲಿ ಎದ್ದುನಿಂತು ನಿಲುವಳಿ ಸೂಚನೆ ತರಲು ಅನುಮತಿ ಕೇಳತಕ್ಕದ್ದು.

ಪರಂತು

ಅಧ್ಯಕ್ಷರು ೬೦ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆ ನೀಡಲು ನಿರಾಕರಿಸಿದರೆ ಅಥವಾ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ

ತಾನು ಅವಶ್ಯವೆಂದು ಭಾವಿಸಿದರೆ ನಿಲುವಳಿ ಸೂಚನೆಯನ್ನು ಓದಿ ಹೇಳಬಹುದು ಮತ್ತು ತಾನು ನಿಲುವಳಿ ಸೂಚನೆಯನ್ನು ತರಲು ಒಪ್ಪಿಗೆಯನ್ನು ನಿರಾಕರಿಸುವುದರ ಹಾಗೂ ನಿಲುವಳಿ ಸೂಚನೆ ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟ ಕಾರಣಗಳನ್ನು ತಿಳಿಸಬಹುದು.

ಮತ್ತು ಪರಂತು ನಿಲುವಳಿ ಸೂಚನೆಯಲ್ಲಿ ತಿಳಿಸಿರುವ ವಿಷಯದ ಬಗ್ಗೆ ಪೂರ್ಣ ಸಂಗತಿ ಅಧ್ಯಕ್ಷರ ಬಳಿ ಇಲ್ಲದಿದ್ದರೆ ಅವರು ಒಪ್ಪಿಗೆ ಕೊಡುವ ಅಥವಾ ನಿರಾಕರಿಸುವುದಕ್ಕೆ ಮುಂಚೆ ನಿಲುವಳಿ ಸೂಚನೆಯನ್ನು ಸದನದಲ್ಲಿ ಓದಬೇಕು ಹಾಗೂ ಮಂತ್ರಿಯಿಂದ ಅಥವಾ ಸಂಬಂಧಪಟ್ಟ ಸದಸ್ಯರಿಂದ ಸಂಕ್ಷಿಪ್ತ ವಿವರಣೆಯನ್ನು ಪಡೆಯಬೇಕು ಆನಂತರ ನಿಲುವಳಿ ಸೂಚನೆಯನ್ನು ಅಂಗೀಕರಿಸುವ ವಿಷಯದಲ್ಲಿ ತನ್ನ ನಿರ್ಣಯವನ್ನು ತಿಳಿಸತಕ್ಕದ್ದು...ಎಂದು ಇದರಲ್ಲಿ ಇದೆ. ಆದ್ದರಿಂದ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಸದಸ್ಯರು ಈ ಬಗ್ಗೆ ಏನು ಕಳಿಸಿದ್ದಾರೆ, ಅವರ ಜೊತೆಯಲ್ಲಿ ತಾವು ಏನಾದರೂ ಪ್ರತ್ಯೇಕವಾಗಿ ಪಾತನಾಡಿ ಎಲ್ಲಾ ವಿಷಯಗಳನ್ನು ಸಂಗ್ರಹಣೆ ಮಾಡಿ ಅವರ ಆಧಾರದ ಮೇಲೆ ನಿಲುವಳಿ ಸೂಚನೆಯನ್ನು ನಿರಾಕರಿಸಿದ್ದೀರೋ ಏನೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು.—ನಿರಾಕರಿಸಿಲ್ಲ. ಕನ್‌ಪರ್ಟ್ ಮಾಡಿದ್ದೇನೆ. ನನಗೂ ಕೂಡ ಕೆಲವೊಂದು ಅಧಿಕಾರ ಇದೆ. ಕೆಲವು ಅಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ನನ್ನ ಛೇಂಬರ್‌ನಲ್ಲೇ ರಿಜೆಕ್ಟ್ ಮಾಡಬಹುದು, ಪಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟು ನಂತರ ರಿಜೆಕ್ಟ್ ಮಾಡಬಹುದು ಇಲ್ಲವೇ ಅಡ್ಜರ್ನ್‌ಮೆಂಟ್ ಮೋಷನ್‌ಅನ್ನು ನೇರವಾಗಿ ಚರ್ಚೆಗೆ ತೆಗೆದುಕೊಳ್ಳಬಹುದು, ಅದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಬಹುದು ಇಲ್ಲವೇ ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡಬಹುದು ಇಷ್ಟು ಅಧಿಕಾರ ನನಗೆ ಇದೆ. ಈ ೫೫-೬ ತೀರ್ಮಾನಗಳಲ್ಲಿ ಯಾವುದಾದರೂ ಒಂದನ್ನು ನಾನು ಮಾಡಬಹುದು. ಪಾರ್ಲಿಮೆಂಟಿನಲ್ಲೂ ಕೂಡ ಅನೇಕ ಸಲ ಈ ರೀತಿ ಮಾಡಿದ್ದಾರೆ, ಇಲ್ಲಿನ ಹಿಂದಿನ ಅಧ್ಯಕ್ಷರು ಮತ್ತು ಶ್ರೀಮತಿ ನಾಗರತ್ನಮ್ಮನವರೂ ಕೂಡ ಹಿಂದೆ ಅಧ್ಯಕ್ಷರಾಗಿದ್ದಾಗ ಇದೇ ರೀತಿ ಮಾಡಿದ್ದಾರೆ. ಈ ಬಗ್ಗೆ ರೂಲಿಂಗ್‌ಗಳೂ ಕೂಡ ಇವೆ. ಪಾರ್ಲಿಮೆಂಟಿರಿ ಪ್ರೊಸೀಜರ್ ಪ್ರಕಾರ ಇದನ್ನು ಮಾಡಿದ್ದೇನೆ. ಈಗ ತಾವು ಪಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು, ನಿಯಮ ೬೮ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿ ನಾನು ಅವರನ್ನೂ ನಿಮ್ಮನ್ನೂ ಕೇಳಿ ನಂತರ ಹೇಳುತ್ತೇನೆ, I will give the ruling. ನಾನು ಈ ಕಡೆ ಇದ್ದಿದ್ದರೆ ನಿಯಮ ೬೮ರ ಪ್ರಕಾರ ಇದರ ಚರ್ಚೆಗೆ ಅವಕಾಶ ಮಾಡಿಕೊಡಿ, ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಇಂದು ಕೇಳುತ್ತಿದ್ದೆ ಆ ಕಡೆ ಇದ್ದಿದ್ದರೆ 'Your ruling is final'. ಎಂದು ಹೇಳುತ್ತಿದ್ದೆ.

ಶ್ರೀ ಎಂ ಎಸ್. ಕೃಷ್ಣನ್.—ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದೇವೆ, ಅದನ್ನು ಮಾಡಿದ ಮೇಲೆ ಇದನ್ನು ಕಾಲಿಂಗ್ ಅಟೆನ್‌ಷನ್‌ಗೆ ಬೇಕಾದರೂ ಕನ್‌ವರ್ಟ್ ಮಾಡಿ ಇಲ್ಲವೇ ನಿಯಮ ೬೮ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಿಯಮ ೬೮ರ ಪ್ರಕಾರ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಿ ಎಂದು ಕೇಳಿದರೆ ಅವರನ್ನೂ ನಿಮ್ಮನ್ನೂ ಕೇಳಿ ನಂತರ ರೂಲಿಂಗ್ ಕೊಡುತ್ತೇನೆ. I will give the ruling,

ಶ್ರೀ ಎಂ. ಎಸ್. ಕೃಷ್ಣನ್ .—ಆ ವಿಷಯಕ್ಕೆ ಅವರನ್ನು ಕೇಳಬೇಕಾದ ಪ್ರಮೇಯವೇ ಇಲ್ಲ. ನಿಲುವಳಿ ಸೂಚನೆ ಬಗ್ಗೆ ಪೂರ್ಣ ಸಂಗತಿ ಅಧ್ಯಕ್ಷರ ಬಳಿ ಇಲ್ಲದಿದ್ದರೆ ಅವರು ಒಪ್ಪಿಗೆ ಕೊಡುವ ಅಥವಾ ನಿರಾಕರಿಸುವುದಕ್ಕೆ ಮುಂಚೆ ನಿಲುವಳಿ ಸೂಚನೆಯನ್ನು ಸದನದಲ್ಲಿ ಓದಬೇಕು ಹಾಗೂ ಸರ್ಕಾರದಿಂದ ಅಥವಾ ಸಂಬಂಧಪಟ್ಟ ಸಚಿವರಿಂದ ಸಂಕ್ಷಿಪ್ತ ವಿವರಣೆಯನ್ನು ಪಡೆಯಬೇಕು. ಆನಂತರ ನಿಲುವಳಿ ಸೂಚನೆಯನ್ನು ಅಂಗೀಕರಿಸುವ ವಿಷಯದಲ್ಲಿ ತನ್ನ ನಿರ್ಣಯವನ್ನು ತಿಳಿಸತಕ್ಕದ್ದು ಎಂದು ಇದರಲ್ಲಿ ಇದೆ.

MR. SPEAKER.—Unless I reverse my ruling that the Adjournment Motion is converted into CAN I cannot give, ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ ಎಂದು ಅವರು ಕೇಳಿದರೆ ಇವರನ್ನೂ ಕೇಳಿ ನಂತರ ತೀರ್ಮಾನ ಮಾಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನಾವು ವಿನಂತಿ ಮಾಡಿದ್ದು ಅದಕ್ಕೋಸ್ಕರವೇ.

ಶ್ರೀ ಆರ್. ವೆಂಕಟರಾಮಯ್ಯ.—ನಿಯಮಾವಳಿಯ ಪ್ರಕಾರ ನೀವು ಸದನವನ್ನು ನಡೆಸ ಬೇಕಾಗುತ್ತದೆ. ಹಿಂದೆ ಅನೇಕ ಕೇಸುಗಳಲ್ಲಿ ಅಡ್ಜರ್ನ್‌ಮೆಂಟ್ ಮೋಷನ್‌ಅನ್ನು ಕಾಲಿಂಗ್ ಅಟೆನ್‌ಷನ್, ನಿಯಮ ೬೮ಕ್ಕೆ ಕನ್‌ವರ್ಟ್ ಮಾಡಿದ್ದೀರಿ. ನಿಯಮಾವಳಿ ೬೩ನ್ನು ಮಾನ್ಯ ಕೃಷ್ಣನ್‌ರವರು ಓದಿ ಹೇಳಿದರು. ನಾನೂ ಕೂಡ ಓದಿ ಹೇಳುತ್ತೇನೆ. ''ಪರಂತು, ಅಧ್ಯಕ್ಷರು ೬೦ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆಯನ್ನು ನೀಡಲು ನಿರಾಕರಿಸಿದರೆ ಅಥವಾ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ ತಾನು ಅವಶ್ಯಕವೆಂದು ಭಾವಿಸಿದರೆ ನಿಲುವಳಿ ಸೂಚನೆಯನ್ನು ಓದಿ ಕೇಳಬಹುದು ಮತ್ತು ತಾನು ನಿಲುವಳಿ ಸೂಚನೆಯನ್ನು ತರಲು ಒಪ್ಪಿಗೆಯನ್ನು ನಿರಾಕರಿಸುವುದರ ಹಾಗೂ ನಿಲುವಳಿ ಸೂಚನೆ ಕ್ರಮಬದ್ಧವಾಗಿಲ್ಲವೆಂದೂ ಅಭಿಪ್ರಾಯ ಪಟ್ಟ ಕಾರಣಗಳನ್ನು ತಿಳಿಸಬಹುದು.''

(ಗೊಂಪಲು)

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ನನಗೆ ಅದು ಗೊತ್ತಿದೆ.

ಶ್ರೀ ಆರ್. ವೆಂಕಟರಾಮಯ್ಯ.. ಪ್ರಿಲಿಮಿನರಿ ಸಬ್‌ಮಿಷನನ್ನು ಕೇಳಿ ಆಮೇಲೆ ತಮ್ಮ ರೂಲಿಂಗನ್ನು ಕೊಡಬೇಕು. You should be satisfied. ಮಂತ್ರಿಯನ್ನು ಕೇಳಿದಮೇಲೆ ಅದು ನಿಲುವಳಿ ಸೂಚನೆಗೆ ಬರುತ್ತದೆಯೋ ಅಥವಾ ಬರುವುದಿಲ್ಲವೋ ಎಂಬುದನ್ನು ಸ್ಪಷ್ಟವಾಗಿ ತಿಳಿದು ಕೊಂಡು ಆ ನಂತರ ನೀವು ಒಂದು ರೂಲಿಂಗನ್ನು ಕೊಡಬೇಕು. 'In an appropriate case the Speaker may be admit a calling attention Notice and the notice of Adjournment .....' ತಾವು ಅನೇಕ ಅಡ್ಜರ್ನ್‌ಮೆಂಟ್ ಮೋಷನನ್ನು ಈ ರೀತಿ ಕಾಲಿಂಗ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿರುವುದು ಸರಿಯಲ್ಲ. ತಾವು ಎಲ್ಲದಕ್ಕೂ ಒಂದೇ ರೂಲನ್ನು ಅಪ್ಲೈ ಮಾಡುವುದು ಬೇಡ. ಅಡ್ಜರ್ನ್‌ಮೆಂಟ್ ಮೋಷನ್ ಇರುವುದನ್ನು ಕಾಲಿಂಗ್ ಅಟೆನ್‌ಷನ್ ಇರುವುದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಮಾಡಿದರೆ ಅದರ ಇಂಪರ್ಟೆನ್ಸ್ ಹೋಗುತ್ತದೆ. ಇಲ್ಲಿ ನಾವು ಬರೀ ಕ್ಲಾರಿಫಿಕೇಷನ್ನನ್ನು ಕೇಳಿಬೇಕಾಗುತ್ತದೆಯೇ ಹೊರತು ಅದರ ಪ್ರಾಮುಖ್ಯತೆ ಹೊರಟು ಹೋಗುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಎಂದು ತಾವು ಟ್ರೀಟ್ ಮಾಡಬೇಕು. ಇಲ್ಲದಿದ್ದರೆ ಪ್ರಿಲಿಮಿನರಿ ಸಬ್‌ಮಿಷನ್ ಆದ ಮೇಲೆ ಮಾತ್ರ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿ ತಮ್ಮ ಒಪೀನಿಯನ್‌ಅನ್ನು ಕೊಡಬೇಕಾಗುತ್ತದೆಯೇ ಹೊರತಾಗಿ ಎಲ್ಲಾ ಕೇಸ್‌ಗಳಲ್ಲೂ ಕಾಲಿಂಗ್ ಅಟೆನ್‌ಷನ್, ನಿಯಮ ೬೮ ಎಂದು ಹೇಳಿದರೆ ಬಹಳ ತೊಂದರೆಯಾಗುತ್ತದೆ. ಇದು ಸರಿಯಾಗುವುದಿಲ್ಲ. ಇದನ್ನು ಪುನರ್ ವಿಮರ್ಶೆ ಮಾಡುವುದಕ್ಕೂ ಕೂಡಾ ಇದರಲ್ಲಿ ತಮಗೆ ಅವಕಾಶ ಕೊಟ್ಟಿದ್ದಾರೆ. ಇದರ ಬಗ್ಗೆ ಸ್ಪಷ್ಟವಾಗಿ ರೂಲ್ ಳಿಖಿರಲ್ಲಿ ಹೇಳಿದ್ದಾರೆ. ಅದು ಕ್ಲಿಯರ್ ಆಗಿದೆ, According to Rule 435, the Speaker can reconsider the decision, if a submission is made to reconsider the decision. ಇದನ್ನು ರೀ-ಕನ್‌ಸಿಡರ್ ಮಾಡಬೇಕು ಎಂದು ಈಗ ಅವರು ಹೇಳುತ್ತಿದ್ದಾರೆ. ಆದ್ದರಿಂದ ಇದನ್ನು ರೀ-ಕನ್‌ಸಿಡರ್ ಮಾಡಿ ಅಡ್ಜರ್ನ್‌ಮೆಂಟ್ ಮೋಷನ್‌ಗೆ ತಾವು ಅವಕಾಶವನ್ನು ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಶ್ರೀ ಎಂ. ಎಸ್. ನಾರಾಯಣರಾವ್‌ರವರು, ಅವರು ಏನು ಹೇಳುತ್ತಾರೋ ಕೇಳೋಣ. ಅವರೂ ಸಹ ಎಂ. ಎ., ಎಲ್ ಎಲ್. ಬಿ. ಮಾಡಿಕೊಂಡಿದ್ದಾರೆ.

ಶ್ರೀ ಎಂ. ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ತಮಗೆ ರಿವೈಸ್ ಮಾಡುವುದಕ್ಕೆ ಅಧಿಕಾರ ಇದೆಯೋ ಇಲ್ಲವೋ ಎಂದು ಕೇಳಿದ್ದೀರಿ. ತಮಗೆ ಅಧಿಕಾರ ಇದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೂಲ್ ೩೪೬ರ ಪ್ರಕಾರ ತಮಗೆ ರೆಸಿಡ್ಯುಯರಿ ಪವರ್ಸ್ ಇದೆ. ಅಂದರೆ ಯಾವ ವಿಚಾರದಲ್ಲಿ ಈ ರೂಲ್ಸ್‌ನಲ್ಲಿ ಪ್ರೊವೈಡ್ ಮಾಡಿರುವುದಿಲ್ಲವೋ ಆ ವಿಚಾರವನ್ನು ಪ್ರೊಸೀಜರ್ ರೆಗ್ಯುಲೇಟ್ ಮಾಡುವುದಕ್ಕೆ ಪೂರ್ತಿ ಪವರ್ಸ್ ತಮಗೆ ಇದೆ. ಇದನ್ನು ರಿವೈಸ್ ಮಾಡಬಾರದು ಎಂದು ರೂಲ್ಸ್‌ನಲ್ಲಿ ಎಲ್ಲಿಯೂ ಹೇಳಿಲ್ಲ. ಆದುದರಿಂದ ಇದನ್ನು ರಿವೈಸ್ ಮಾಡುವುದಕ್ಕೆ ತಮಗೆ ಪವರ್ಸ್ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಾದಮೇಲೆ ಅಡ್ಜರ್ನ್‌ಮೆಂಟ್ ಮೋಷನನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೀರಿ, ಇಲ್ಲಿ ರೂಲ್ ಳಿಖಿನನ್ನು ಓದಿದ್ದೀರಿ. ಅದನ್ನು ನಾನು ಸಹ ಎರಡು-ಮೂರು ಸಾರಿ ಓದಿದ್ದೇನೆ ತಾವು ರೂಲಿಂಗ್ ಕೊಟ್ಟಿರುವ ರೂಲ್ಸ್ ೧೯೭ನ್ನು ಲೋಕಸಭಾ

ರೂಲ್ಸ್‌ನಲ್ಲಿ ಕೊಟ್ಟಿದ್ದಾರೆ, ಅದನ್ನು ಕೆಳಗೆ ನೋಟ್ ಮಾಡಿದ್ದಾರೆ. ಲೋಕಸಭಾ ರೂಲ್ಸ್‌ನ್ನು ತೆಗೆದುಕೊಂಡು ಬಂದು ನೋಡಿದರೆ ಅವರ ರೂಲ್ಸ್ ಯಾವ ತರಹ ಇದೆ, ಅದರ ವರ್ಡಿಂಗ್ಸ್ ಯಾವ ತರಹ ಇದೆ, ಅದನ್ನೂ ಕೂಡಾ ನೋಡಬೇಕಾದ್ದು ಬಹಳ ಮುಖ್ಯ.

ಅಧ್ಯಕ್ಷರು.—ರೂಲ್ಸ್ ನಮ್ಮವರಿಗೂ ಮತ್ತು ಅವರಿಗೂ ಏನೂ ಛೇಂಜ್ ಇಲ್ಲ. ಪಾರ್ಲಿಮೆಂಟ್‌ನಲ್ಲಿ ಏನು ರೂಲ್ಸ್ ಇದೆ, ನಮ್ಮದೂ ಅದೇ ರೂಲ್ಸ್ ಇದೆ.

ಶ್ರೀ ಎಂ. ಎಸ್. ನಾರಾಯಣರಾವ್.—ರೂಲ್ ೧೯೭ನ್ನು ಸಹ ತಾವು ನೋಡಬೇಕಾಗುತ್ತದೆ. ಅದನ್ನು ನೋಡಿದರೆ...

PROFF A. LAXMISAGAR.—I will pass on this rule. It is para-materia with our rules. There is not even a difference of hyphen, or full-stop or coma. Nothing is changed.

ಶ್ರೀ ಎಂ. ಎಸ್. ನಾರಾಯಣರಾವ್.—ಆದುದರಿಂದ ನಾನು ಹೇಳುವುದು ಏನು ಎಂದರೆ ಇದನ್ನು ಕಾಲಿಂಗ್ ಅಟೆನ್‌ಷನ್ ಎಂದು ತಾವು ಪರಿವರ್ತನೆ ಮಾಡಬಾರದು ಎಂದು ಇದ್ದರೂ ಸಹಿತ ಅದನ್ನು ಸರಿಯಿಲ್ಲ ಎಂದು ತಮಗೆ ಕಂಡುಬಂದರೆ ಅದನ್ನು ರಿವೈಸ್ ಮಾಡುವುದಕ್ಕೆ ಪೂರ್ತಿ ಪವರ್ಸ್ ತಮಗೆ ಇದೆ. ಅವರು ಹೇಳಿರುವ ರೀತ್ಯಾ ಇದು ಬಹಳ ಮುಖ್ಯವಾದ ವಿಷಯ. ಇದನ್ನು ಕಾಲಿಂಗ್ ಅಟೆನ್‌ಷನ್‌ನಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಕಾಲಿಂಗ್ ಅಟೆನ್‌ಷನ್‌ನಲ್ಲಿ ಚರ್ಚೆ ಮಾಡುವುದರಿಂದ ಸರಿಯಾದ ವಿಚಾರಗಳು ಹೊರಗೆ ಬರುವುದಿಲ್ಲ ಎಂದು ತಮಗೆ ಮನಗಂಡರೆ ಖಂಡಿತವಾಗಿಯೂ ಅದನ್ನು ರಿವೈಸ್ ಮಾಡಬಹುದು ಎಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ಈಗ ಲಾ ಮಿನಿಸ್ಟರ್ ಏನು ಹೇಳುತ್ತಾರೋ ನೋಡೋಣ.

ಪ್ರೊ|| ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ...

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ತಮ್ಮಲ್ಲಿ ವಿನಯಪೂರ್ವಕವಾಗಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ತಾವು ಹಠ ಹಿಡಿದು ಯಾವ ವಿಷಯವನ್ನೂ ಕೂಡಾ ಮುಂದುವರಿಸಬಾರದು ಎಂದು ನನ್ನ ಮೊದಲನೆಯ ನಿವೇದನೆ, ಈಗ ನಾವು ಏನು ತರ್ಕ ಮಾಡಿದ್ದೇವೆ, ಶ್ರೀಮಾನ್ ಕೃಷ್ಣನ್ ರವರು, ಶ್ರೀಮಾನ್ ವೆಂಕಟರಾಮಯ್ಯನವರು ಮತ್ತು ನಾನು ಏನು ಮಾತನಾಡಿದ್ದೇವೆ, ಅದನ್ನು ತಮಗೆ ಕನ್‌ವರ್ಟ್ ಮಾಡಲಿಕ್ಕೆ ನಿಯಮದಲ್ಲಿ ಏನೂ ಇಲ್ಲ ಎಂದಾಗ ಆ ನಿಯಮಾವಳಿಯನ್ನು ಬಿಟ್ಟುಬಿಟ್ಟು ಪ್ರಿಸಿಡೆಂಟ್ ಎಂದು, ಸಂಪ್ರದಾಯ ಎಂದು, ಇದು ಅನುಚಾನವಾಗಿ ನಡೆದುಕೊಂಡು ಬಂದಿದೆ ಎಂದು ತಾವು ಏನು ಹೇಳುತ್ತಿದ್ದೀರಿ...

ಅಧ್ಯಕ್ಷರು.—I agree. ಬಸವಲಿಂಗಪ್ಪನವರೇ, ತಾವು ಸೀನಿಯರ್ ಮೆಂಬರ್ ಇದ್ದೀರಿ, ನಿಮ್ಮಲ್ಲಿ ನನ್ನ ಇನ್‌ಫಿರಿಯರ್ ರಿಕ್ವೆಸ್ಟ್ ಏನೆಂದರೆ, ಕೋರ್ಟ್‌ನಲ್ಲಿ ಏನು ಮಾಡುತ್ತಾರೆ, ಫಿರ್ಯಾದಿ ಪ್ರಾಸಿಕ್ಯೂಟರ್ ಏನು ಮಾಡುತ್ತಾರೆ ಎಂದರೆ ಫಿರ್ಯಾದಿ ಅಥವಾ ಆರೋಪಿ ಆತ ನಿರಪರಾಧಿ ಇದ್ದರೂ ಕೂಡಾ ಆತ ಅಪರಾಧಿ ಎಂದು ಪ್ರಾಸಿಕ್ಯೂಟರ್ ಹೇಳುತ್ತಾನೆ. ಆದರೆ ಡಿಫೆನ್ಸ್ ಲಾಯರ್ ಏನು ಹೇಳುತ್ತಾರೆ, ಅಪರಾಧಿ ಇದ್ದರೂ ಕೂಡ ನಿರಪರಾಧಿ ಎಂದು ಆರ್ಗ್ಯೂ ಮಾಡುತ್ತಾರೆ. ಆದರೆ ಇಲ್ಲಿ ಅದು ಬೇಡ. ನಾನು ಯಾಕೆ ಹೇಳುತ್ತಿದ್ದೇನೆ ಅಂದರೆ I am your representative. ಅದಕ್ಕೆ ಸರಿಯಾಗಿ ನೀವು ಟ್ವಿಸ್ಟ್ ಮಾಡಿ ಅಪರಾಧಿಯನ್ನು ನಿರಪರಾಧಿ ಎಂದು ಹೇಳಿದ ಹಾಗೆ ನಿರಪರಾಧಿಯನ್ನು ಅಪರಾಧಿ ಎಂದು ಮಾಡಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಇಷ್ಟು ಸಮಾಧಾನವಾಗಿ ಕೇಳುತ್ತಾ ಇರುವುದು ನೋಡಿದರೆ ಸರ್ಕಾರ ಇವೊತ್ತು ಬೇರೆ ಯಾವುದೇ ಬಿಸಿನೆಸ್ ನಡೆಯುವುದು ಬೇಡ, ಹಾಗೆ ಕಾಲಹರಣ ಮಾಡಿ ಮುಂದಕ್ಕೆ ಹಾಕಬೇಕೆಂದು ಪೂರ್ವಸ್ಥಿತವಾಗಿ ಏನಾದರೂ ತೀರ್ಮಾನ ಮಾಡಿದ್ದಾರೋ ಏನೋ ಎಂಬ ಅನುಮಾನ ಬರುತ್ತಿದೆ. ತಾವು ಇಷ್ಟು ಸಮಾಧಾನವಾಗಿರುವುದನ್ನು ನೋಡಿದರೆ ಯಾವುದೇ ಕಾರ್ಯಕಲಾಪಗಳು ನಡೆಯುವುದು ಬೇಡ, ಯಾಕೆಂದರೆ ಕಾರ್ಯಕಲಾಪಗಳು ನಡೆದರೆ ಬಹಳ ಪ್ರಾಮುಖ್ಯವಾದಂತಹ ಅನೇಕ ವಿಷಯಗಳು ಬೆಳಕಿಗೆ ಬರುತ್ತದೆ ಎನ್ನುವ ನಿಶ್ಚಯ ಆಗಿದೆ...

ಶ್ರೀ ಎಂ. ರಘುಪತಿ.—ಈಗ ತಾನೆ ಮಾನ್ಯ ಅಧ್ಯಕ್ಷರು ಮುತ್ತಿನಂತಹ ಎರಡು ಮಾತುಗಳನ್ನು ಹೇಳಿದ್ದಾರೆ, ಅದ್ದರಿಂದ ನಿಮ್ಮ ವಾದ ನೆಗೆದು ಬಿದ್ದುಹೋಯಿತು.

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಸಂತೋಷ. ಇದು ಬಹಳ ಮಹತ್ವವಾಗಿರುವ ವಿಷಯವಾದ ಕಾರಣ ನಾಳೆ ಸದನ ನಡೆಯುವ ವಿಧಾನವನ್ನು ತೀರ್ಮಾನ ಮಾಡಿದ್ದೀರಿ, ಇವೊತ್ತು ನಾವು ಏನು ಮಾಡಿದ್ದೇವೆ ಅದು ಸರಿ ಎನ್ನುವಕ್ಕೆ ಮಾತನ್ನು ಏನು ಹೇಳುತ್ತಿದ್ದೀರಿ, ಆ ಮಾತ ಸರಿಯಿಲ್ಲ. ಎಲ್ಲಾ ವಿಷಯ ಸದನದ ನಿಯಮಾವಳಿಗಳ ಪ್ರಕಾರ ನಡೆಯುತ್ತದೆ, ಅವನ್ನು ಸ್ಥಗಿತಗೊಳಿಸುತ್ತೇವೆ, ಸದನ ಒಪ್ಪಿದರೆ ಎಂದು ಹೇಳುವುದು ಅದು ಕೂಡ ನಿಯಮಾವಳಿ ಆಗಬೇಕಾಗಿದ್ದಿಲ್ಲ. ಆದರೆ ಇವೊತ್ತು ಏನು ಆಗಿದೆ ಅಂದರೆ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಕಾಲ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೀರಿ. ನಮಗೆ ಅಧಿಕಾರ ಇಲ್ಲ ಎಂದು ವಾದಿಸಿದ್ದೀರಿ, ನೀವು ಅದಕ್ಕೆ ಮನ್ನಣೆ ಕೊಡಬೇಕಾ...

ಅಧ್ಯಕ್ಷರು.—ಅಧಿಕಾರ ಇಲ್ಲವೆಂದು ನೀವು ವಾದಿಸುವುದೂ ಸರಿಯಲ್ಲ. ನಾನು ಈಗಾಗಲೇ ಹೇಳಿದ್ದೇನೆ. ಪ್ರಾಸಿಕ್ಯೂಟರ್ ಮತ್ತು ಡಿಫೆನ್ಸ್ ಲಾಯರ್ ಬಗ್ಗೆ ಹೇಳಿದ್ದೇನೆ. ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಕಾಲ್ ಅಟೆನ್‌ಷನ್‌ಗೆ ಕನ್‌ವರ್ಟ್ ಮಾಡಿದ್ದೇನೆ. ಸರ್ಕಾರದವರು ಏನು ಹೇಳಿದ್ದಾರೆ ಅಂದರೆ ಚರ್ಚೆ ಮಾಡಲಿ ಎಂದು ದಲಿತ ವರ್ಗದವರ ಮೇಲೆ ಆದಂತಹ ಅನ್ಯಾಯದ ಬಗ್ಗೆ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ನಾಗರತ್ನಮ್ಮನವರು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ಅದು ಅತಿ ಮಹತ್ವದ್ದು ಇದೆ ಎಂದು ಹೇಳಿ ಗಮನ ಸೆಳೆಯುವ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಸಾಕಷ್ಟು ಅವಕಾಶವನ್ನು ಇಲ್ಲಿ ಕೊಟ್ಟಿದ್ದೇನೆ, ಕಾಲ್ ಅಟೆನ್‌ಷನ್ ಮೇಲೆ ಒಂದು ತಾಸು ಚರ್ಚೆಯಾಗಿದೆ, ಮ್ಯಾಕ್ಸಿಮಮ್ ಅವಕಾಶ ಕೊಟ್ಟಿದ್ದೇನೆ. ನಾನು ಯಾಕೆ ಈ ವಿಷಯವನ್ನು ಹೇಳುತ್ತಿದ್ದೇನೆ ಎಂದರೆ ಕನ್‌ವೆನ್‌ಷನ್ ಇದೆ, ಅದರ ಪ್ರಕಾರ ಮಾಡಿದ್ದೇನೆ. ನೀವು ನೇರವಾಗಿ ರಿಕ್ವೆಸ್ಟ್ ಮಾಡಿ ನಿಮ್ಮ ರೂಲಿಂಗ್ ಅನ್ನು ರೀ ಕನ್ಸಿಡರ್ ಮಾಡಿ ಎಂದು. ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಕ್ಕೆ ರೂಲ್ ೬೮ ರ ಪ್ರಕಾರ ಅವಕಾಶ ಕೊಡುತ್ತೇನೆ. ಆದರೆ ನಿಯಮ ೬೫ ರ ಪ್ರಕಾರಲ್ಲ, Preliminary ಸಬ್ಮಿಷನ್‌ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ೬೮ ರ ಪ್ರಕಾರ ಮನವಿ ಮಾಡಿ. ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಕೊನೆಯದಾಗಿ ಒಂದು ಮಾತು ಹೇಳಲಾ ? ಕಾನೂನು ಏನೇ ಇರಲಿ ನಿಯಮಾವಳಿಗಳು ಏನೇ ಇರಲಿ, ಪ್ರಿಸಿಡೆಂಟ್ಸ್ ಏನೇ ಇರಲಿ, ಈಗ ಪರಿಸ್ಥಿತಿ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕೊಟ್ಟಿದ್ದೇವೆ, ಅದನ್ನು ಕಾಲ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಲಿಕ್ಕೆ ನಿಮಗೆ ಅಧಿಕಾರ ಇಲ್ಲ ಎಂದು ನಾವು ಎಲ್ಲಾ ವಾದಿಸಿದ್ದೇವೆ.

ಅಧ್ಯಕ್ಷರು.—ಅದನ್ನು ಛೇಂಜ್ ಮಾಡಬೇಕೆಂದು ಕೇಳಿ...

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದ ಪರವಾಗಿ ಯಾರು ಬರುತ್ತಾರೆ ಬರಲಿ. ನಮ್ಮ ಪರವಾಗಿ ಕೆಲವರು ಬರುತ್ತಾರೆ. ತಮ್ಮ ಛೇಂಬರ್‌ನಲ್ಲಿ ತೀರ್ಮಾನ ಮಾಡಿ. ಅಲ್ಲಿ ತೀರ್ಮಾನ ಮಾಡಿದ ಪ್ರಕಾರ ನಡೆದುಕೊಳ್ಳಲು ನಮ್ಮ ಒಪ್ಪಿಗೆ ಇದೆ.

MR. SPEAKER.—I do agree with you. ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳುತ್ತೇನೆ.

ಶ್ರೀ ಪೈ. ಕೆ, ರಾಮಯ್ಯ.—ನಮಗೆ ಒಂದು ಅವಕಾಶ ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ. ರಾಮಯ್ಯನವರಿಗೆ ತಾವು ಹೇಳಿದ್ದೀರಿ, ನಿಮ್ಮ ವಿಚಾರವನ್ನು ಕೇಳುತ್ತೇನೆ ಎಂದು.....

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದೂ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಇದೆ, ತಾವು ಯಾವಾಗ ಅವಕಾಶ ಕೊಡುತ್ತೀರಿ...

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ತಾವು ರಾಮಯ್ಯನವರಿಗೆ ಇದೆಲ್ಲಾ ಆದ ಮೇಲೆ ನಿಮ್ಮ ವಿಚಾರ ಕೇಳುತ್ತೇನೆ ಎಂದು ಹೇಳಿದ್ದೀರಿ. ಅವರಿಗೂ ಒಂದು ಅವಕಾಶ ಮಾಡಿಕೊಡಿ.

ಅಧ್ಯಕ್ಷರು. ಆಗಬಹುದು.

† ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಮ್ಮ ಬಗ್ಗೆಯೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂಬ ಇಚ್ಛೆ ನನಗೆ ಇದೆ. ಏನೆಂದರೆ ಹತ್ತಾರು ವರ್ಷಗಳ ಕಾಲ ವಕೀಲ ವೃತ್ತಿ ಮಾಡಿದ ಕಾನೂನು ಜ್ಞಾನದ ಹಿನ್ನೆಲೆ ತಮಗಿದೆ. ಸಾರ್ವಜನಿಕ ಜೀವನದಲ್ಲಿ ಮಂತ್ರಿಗಳಾಗಿ, ಶಾಸಕರಾಗಿ ಈ ಮನೆಯ ಅಧ್ಯಕ್ಷರಾಗಿ, ಸಂಸದೀಯ ವ್ಯವಹಾರದಲ್ಲಿ ಅಪಾರವಾದ ಜ್ಞಾನ ತಮಗೆ ಇದೆ, ಇದರ ಬಗ್ಗೆ ಅನುಮಾನ ಇಲ್ಲ. ತಮ್ಮ ಪ್ರಾಮಾಣಿಕತೆ ಪ್ರಶ್ನಾತೀತ. ರೈತರ ಬಗ್ಗೆ ತಮಗಿರುವ ಕಳಕಳಿ ವಿಷಯ ಮೆಚ್ಚುವಂತಹದ್ದು. ಆದರೆ ತಮ್ಮ ನಿಷ್ಪಕ್ಷಪಾತತೆಯ ಬಗ್ಗೆ ನನಗೆ ಅನುಮಾನ ಬರುತ್ತದೆ. ಕಾರಣ ಇಷ್ಟೆ! ಈ ಸಭೆಯಲ್ಲಿ ನಡೆಯುವಂತಹ ಘಟನೆಗಳು. ಸರ್ಕಾರದ ಪರವಾಗಿ ಲಿಖಿತ ಉತ್ತರಗಳನ್ನು ಸಭೆಯ ಮುಂದೆ ಇಡುತ್ತೇವೆಂದು ಹೇಳಿದರು, ಆದರೆ ಸಭೆಯ ಮುಂದೆ ಅವರು ಇಡಲಿಲ್ಲ. ಆ ಸಂದರ್ಭದಲ್ಲಿ ತಾವು ಒಂದು ಮಾತು ಹೇಳಿದಿರಿ; ಏನೆಂದರೆ, "I cannot compel the government," ಎಂದು;

Mr Speaker.—But I can suggest them: I can advice them.

ಶ್ರೀ ವೈ. ಕೆ. ರಾಮಯ್ಯ.—ನಾನು ಒಂದು ಮಾತನ್ನು ಹೇಳುತ್ತೇನೆ, ತಾವು ರೂಲಿಂಗ್ ಕೊಟ್ಟಿದ್ದೀರಿ. ಸರ್ಕಾರ ಯಾವುದೋ ಒಂದು ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತದೆ. ಈಗ ಉದಾಹರಣೆಗೆ ಈ ಸಭೆಯ ಮುಂದೆ ಲಿಖಿತ ಉತ್ತರಗಳನ್ನು ನೀಡಲಾಗಿದೆ ಎಂದು ಹೇಳಿದ್ದಾರೆ. ಆಮೇಲೆ ಅದೇ ಮಂತ್ರಿಗಳು ಹೇಳಿದ್ದಾರೆ, ಶೇಕ್ಕೆ ಪಾತ್ರ ಉತ್ತರ ಇಟ್ಟಿದ್ದೇವೆ, ಇನ್ನು ಟಿಕ್ಕೆ ಇಡುವುದಕ್ಕೆ ಆಗಿಲ್ಲ ಎಂದು. ಆಮೇಲೆ ಹೇಳಿದ್ದಾರೆ, ನಾವು ಸಪ್ಲೈ ಮಾಡಿದ್ದೇವೆ. ಆದರೆ ತಮ್ಮ ಆಫೀಸಿನವರು ಡಿಸ್ಪ್ಯಾಚ್ ಮಾಡಿಲ್ಲ ಎಂದು. ಈಗ ಇರುವಂಥ ಪ್ರಶ್ನೆ ಆಷ್ಟೆ; ಲಿಖಿತ ಉತ್ತರಗಳನ್ನು ಈ ಸಭೆಯ ಮುಂದೆ ಇಡಲಾಗಿದೆಯೇ ? ಇಡಲಾಗಿದ್ದರೆ ನಿಮ್ಮ ಆಫೀಸಿನವರು ಅದನ್ನು ಹಂಚಿಲ್ಲವೇ– ಇದು ಒಂದನೇ ಪ್ರಶ್ನೆ. ಲಿಖಿತ ಉತ್ತರಗಳನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ ಎಂದು ಹೇಳಿಯೂ ಸರ್ಕಾರವು ಆ ಪ್ರಶ್ನೆಗಳನ್ನು ಸಭೆಯ ಮುಂದೆ ಇಡುವಂತ ಕೆಲಸವನ್ನು ಮಾಡದೇ ಇದ್ದರೆ ಆಗಲೂ ಕೂಡ ನೀವು I cannot compel the government. ಎಂದು ಹೇಳಿದರೆ ನಾನು ನಿಮ್ಮನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ, ಏಕೆಂದರೆ ಈ ಸಭೆಯ ಸದಸ್ಯರು ಏನಾದರು ನಿಸ್ಸಹಾಯಕರೇ ? ಆರ್ ಯು ಹೆಲ್ಪ್‌ಲೆಸ್ ಹಾಗಿದ್ದರೆ ನಾವು ಇನ್ನು ಏಲ್ಲಿಗೆ ಹೋಗಬೇಕು ಈ ಸದನವ ಮುಂದೆ ಲಿಖಿತ ಉತ್ತರಗಳನ್ನು ಇಡದೇ ಇದ್ದರೂ ಕೂಡ ಇಟ್ಟಿದ್ದೇನೆ ಎಂದು ಸರ್ಕಾರದ ಪರವಿಯಿಂದ ಹೇಳಿಕೆಯನ್ನು ಕೊಟ್ಟಾಗ, ಅದನ್ನು ಇಡಲಿಲ್ಲ ಎನ್ನುವುದು ತಮ್ಮ ಗಮನಕ್ಕೂ ಬಂದಾಗ ತಾವು ಅದರ ಬಗ್ಗೆ ನಾನು ಏನೂ ಮಾಡಲಾರೆ ಎಂಬ ಅಸಹಾಯಕತೆಯನ್ನು ನಮ್ಮ ಮುಂದೆ ಹೇಳಿದರೆ, ನಾವುನಮ್ಮ ವಿರುದ್ಧವಾಗಿ ಕೋರ್ಟಿಗೆ ಹೋಗಲಿಕ್ಕೆ ಸಾಧ್ಯವಿಲ್ಲ; ಮತ್ತೆ ಯಾವುದೇ ವೇದಿಕೆ ಹತ್ತಲಿಕ್ಕೆ ಸಾಧ್ಯವಿಲ್ಲ, ಹೊರಗಡೆ ನಿಮ್ಮ ಬಗ್ಗೆ ಭಾಷಣ ಮಾಡಲಿಕ್ಕೆ ಸಾಧ್ಯವಿಲ್ಲ: ಹಾಗಿದ್ದರೆ ನಾವು ಇನ್ನೆಲ್ಲಿಗೆ ಹೋಗಬೇಕು ? ದಯವಮಾಡಿ ಇದಕ್ಕೆ ತಾವು ಉತ್ತರ ಕೊಡುತ್ತೀರಾ ಸ್ವಾಮಿ. ಈಗ ನಿಯಮ ೫೩ಳಿರ ಕೆಳಗೆ ವಿಷಯಗಳು ಬರುತ್ತವೆ. ಆದಕ್ಕೆ ಕಂಪೆಲ್ ಮಾಡುವುದಕ್ಕಾಗುವುದಿಲ್ಲ. ಆದರೆ ಲಿಖಿತ ಉತ್ತರಗಳನ್ನು ಸಭೆಯ ಮುಂದೆ ಇಟ್ಟಿದ್ದೇನೆ ಎಂದು ಹೇಳಿಯೂ ಕೂಡ ಆ ಉತ್ತರಗಳನ್ನು ಸಭೆಯ ಮುಂದೆ ಇಡದಂತಹ ಸಂದರ್ಭದಲ್ಲಿಯೂ ಕೂಡ ನಾನು ಅಸಹಾಯಕ, I cannot compel the government, ಎನ್ನುವ ಅಭಿಪ್ರಾಯವನ್ನು ತಾವು ವ್ಯಕ್ತ ಪಡಿಸುವುದು ಸರಿಯಲ್ಲ ಎನ್ನುವುದು ನನ್ನ ಭಾವನೆ. ಆದು ದರಿಂದ ದಯಮಾಡಿ ಅಂತಹ ಸಂದರ್ಭದಲ್ಲಿ ತಾವು it is the obligatory duty of the government ಎಂದು ಹೇಳಬೇಕು. ಸಭೆಯ ಮುಂದೆಇಟ್ಟಿದ್ದೇನೆ ಎಂದು ಹೇಳುವುದು, ಆದರೆ ಇಲ್ಲಿ ಇಟ್ಟೇ ಇಲ್ಲ. ಆದುದರಿಂದ ಅಂತಹ ಸಂದರ್ಭ ಬಂದಾಗ ನೀವು ಅಸಹಾಯಕರೆ, ನೀವು ಅಸಹಾಯಕರಾದರೆ ನಾವು ಇನ್ನೆಲ್ಲಿಗೆ ಹೋಗಬೇಕು. ಈ ಪ್ರಶ್ನೆ ಬಗ್ಗೆ ತಾವು ದಯವಮಾಡಿ ರೂಲಿಂಗ್ ಕೊಡಬೇಕು ಎಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು.—ಈಗ ಶ್ರೀ. ಕೆ. ರಾಮಯ್ಯನವರು ತಮ್ಮ ಆನಿಸಿಕೆಯನ್ನು ಏನು ಹೇಳಿದರು ಅದು ನೂರಕ್ಕೆ ನೂರರಷ್ಟು ಕರೆಕ್ಟ್ ಇದೆ. ಏಕೆಂದರೆ, ಒಮ್ಮೊಮ್ಮೆ ಹಿಂದಿನ ಸ್ಪೀಕರ್‌ರವರು ಮತ್ತು ಪಾರ್ಲಿಮೆಂಟಿನ ಸ್ಪೀಕರ್‌ರವರು ಅನೇಕ ರೂಲಿಂಗ್‌ಗಳನ್ನು ಕೊಟ್ಟಿದ್ದಾರೆ. I cannot compel the government ಎನ್ನುವಂಥ ಸಂಪ್ರದಾಯ ಮೊದಲಿನಿಂದಲೂ ಬಂದುಬಿಟ್ಟಿದೆ. ನಾನು ದಾಕ್ಷಿಣ್ಯಪರ ಅಲ್ಲ. ನಾನು ಎಷ್ಟೂ ಸಲಹೆ ಮತ್ತು ಸೂಚನೆಗಳನ್ನು ನಿಷ್ಪಕ್ಷಪಾತವಾಗಿ, ನಿರ್ಧಾಕ್ಷಿಣ್ಯವಾಗಿ ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇನೆ ಅಂದರೆ ನನ್ನಷ್ಟು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸ್ಟ್ಯಾಂಗಾಗಿ ಪತ್ರಗಳನ್ನು ಇನ್ನಾವ ಸ್ಪೀಕರ್‌ಗಳೂ ಮಂತ್ರಿಗಳಿಗೆ ಬರೆದಿಲ್ಲ ಮತ್ತು ಮುಖ್ಯ ಮಂತ್ರಿಗಳಿಗೂ ಬರೆದಿಲ್ಲ, ಸದಸ್ಯರಿಗೂ ಬರೆದಿಲ್ಲ. ಅಷ್ಟು ನಿಷ್ಕಾರವಾಗಿ ನಾನು ಬರೆಸಿದ್ದೇನೆ, ನಾನು ಅವರಿಗೆ ಅನೇಕ ಸಾರಿ ಹೇಳಿದ್ದೇನೆ, ಉತ್ತರ ಕೊಡಲೇಬೇಕು ಎಂದು ಹೇಳಿದ್ದೇನೆ, ಕಂಪೆಲ್ ಮಾಡಿದ್ದೇನೆ. ನಿಮ್ಮ ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡಬೇಕು ಎಂದು ಹೇಳಿದ್ದೇನೆ. ನಿಮ್ಮ ಅಧಿಕಾರಿಗಳು ನಿಮ್ಮ ಮಾತು ಕೇಳಲಿಲ್ಲ ಅಂದರೆ, ವಿಧಾನಸಭಾ ಸದಸ್ಯರಿಗೆ ಸರಿಯಾಗಿ ಮಾಹಿತಿಯನ್ನು ಕೊಡಲಿಲ್ಲ ಅಂದರೆ ೩ ತಿಂಗಳು, ೪ ತಿಂಗಳು ಟೈಂ ಕೇಳುತ್ತಾರೆ ಅಂದರೆ ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡಿ, ಸಸ್ಪೆಂಡ್‌ನಲ್ಲಿ ಇಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಏಕೆಂದರೆ, ಕರ್ನಾಟಕ ರಾಜ್ಯದ ೪ ಕೋಟಿ ಜನರ ಪ್ರತಿನಿಧಿಗಳು ಈ ೨೨೪ ಮಂದಿ ಶಾಸಕರ ಪ್ರತಿನಿಧಿಯಾಗಿರುವ ನಾನು ಅವರ ಹಕ್ಕುಭಾಧ್ಯತೆಗಳ ಬಗ್ಗೆ ಕೇಳತಕ್ಕಂಥಾದ್ದು ನನ್ನ ಕರ್ತವ್ಯ. ಅವರಿಗೆ ಬೇಕಾದ ಮಾಹಿತಿಗಳನ್ನು ಅವರ ಗೌರವಕ್ಕೆ ಧಕ್ಕೆ ಬರದಹಾಗೆ ಕಾಯ್ದುಕೊಂಡು ಒದಗಿಸುವುದು ನನ್ನ ಕರ್ತವ್ಯ ಎನ್ನುವುದನ್ನು ಸರ್ಕಾರಕ್ಕೆ ನಿಷ್ಕರ್ಷವಾಗಿ ಹೇಳಿದ್ದೇನೆ. ಹೆಗಡೆಯವರು ಬಂದಲಾಗಾಯ್ತು ಅವರಿಗೆ ಯಾವ ಯಾವ ತರಹದ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ ಎನ್ನುವಂಥಾದ್ದನ್ನು ಸದನದ ಮುಂದೆ ಇಡಬೇಕು ಅಂದರೆ ಆ ಪತ್ರಗಳಷ್ಟನ್ನೂ ಇಡುತ್ತೇನೆ. ನಾನು ಪ್ರಮಾಣ ಪೂರ್ವಕವಾಗಿ ಹೇಳಬೇಕು ಅಂದರೆ ನನ್ನಷ್ಟು ನಿಷ್ಕರ್ಷವಾಗಿ ಯಾವ ಮಂತ್ರಿಗಳೂ ಇಲ್ಲ ಹಾಗೂ ಯಾವ ಶಾಸಕರೂ ಇಲ್ಲ. ಶ್ರೀಮಾನ್ ದೇವರಾಜ ಅರಸ್‌ರವರು ಇದ್ದಾಗ ನಾನು ಅವರಿಗೆ ಹೇಳಿದೆ. ಏನೆಂದರೆ, "What you have said is far from truth and baseless. I want this question to be withheld" ಎಂದು ಆಗ ಮಾಡಂ ಅವರೂ ಇದ್ದರು. ಆಮೇಲೆ ನನ್ನ ಪ್ರಶ್ನೆಗೆ ಸರಯಾದ ಉತ್ತರ ಕೊಟ್ಟರು ಹೆಲ್ಪ್‌ಫುಲ್ ಆಗಿ ಮಾಡಿಕೊಂಡು. ಆಮೇಲೆ ನನ್ನನ್ನು ಕರೆದು It is good that you have put such a question. Lot of things have been brought to my notice ಎಂದು ಹೇಳಿದರು. ಆಮೇಲೆ ನನ್ನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಬಂದೀತ್ತು, ಶಾಸಕರಿಗೆ ಕಳಿಸಿಕೊಡಿ ಎಂದು ಹೇಳಿದೆ. ನಮ್ಮ ಆಫೀಸಿನಿಂದ ಪ್ರತಿಯೊಬ್ಬರಿಗೂ ಉತ್ತರ ಕಳಿಸಿ ಕೊಡುವಂಥ ವ್ಯವಸ್ಥೆ ಇದೆ. ಎಲ್ಲವೂ ಸೆಂಟ್‌ಪರ್ಸೆಂಟ್ ಫರ್‌ಫೆಕ್ಟ್ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೂ ಕೂಡ ನಿಷ್ಕರ್ಷವಾಗಿ ಈ ಕೆಲಸ ಮಾಡುವುದಕ್ಕೆ ಹತ್ತಿದ್ದೇನೆ. ಆದುದರಿಂದ ಸರ್ಕಾರದವರಿಗೆ ನೀವು ದಯವಿಟ್ಟು ತಮಗೆಲ್ಲಾ ಉತ್ತರಗಳನ್ನು ಕೊಡಿ ಎಂದು ಹೇಳುತ್ತೇನೆ. ಈಗಾಗಲೆ ಸ್ಪಷ್ಟವಾಗಿ ಅನೇಕ ಸಾರಿ ಹೇಳಿದ್ದೇನೆ. ಈಗಲ್ಲೂ ಹೇಳುತ್ತಾ ಇದ್ದೇನೆ. ಆದರೆ ರೂಲ್ಸ್ ಏನಿದೆ ಅಂದರೆ, ಪಾರ್ಲಿಮೆಂಟ್ ಸ್ಪೀಕರ್ ಹೇಳಿದ್ದು ಇದೆ. ಏನೆಂದರೆ, I cannot compel, but I can persuade them, I can guide them and I can direct them ಎಂದು. ಆದ್ದರಿಂದ, ರಾಮಯ್ಯನವರೇ, ನಾನು ನಿಮ್ಮ ಪರವಾಗಿ ಶಾಸಕರ ಪರವಾಗಿ ಈ ಕಡೆ ಇರಲಿ, ಆ ಕಡೆ ಇರಲಿ, ಎಷ್ಟು ಮಾಡಬೇಕೋ ಅಷ್ಟು ಶಕ್ತಿಮೀರಿ ಪ್ರಯತ್ನ ಮಾಡಿ ಕೆಲಸ ಮಾಡುತ್ತೇನೆ. ಇಲ್ಲಿ ನೀವು ಇದ್ದಾಗ ಏನು ಮಾಡುತ್ತಿದ್ದೀರಿ ಅದನ್ನು ಅವರು ಮಾಡುತ್ತಿದ್ದಾರೆ. ಅವರು ಇಲ್ಲಿ ಇದ್ದಾಗ ಏನು ಮಾಡುತ್ತಿದ್ದಾರೆ. ಮಂತ್ರಿಗಳಾಗಿ, ಸದಸ್ಯರ ಅಭಿಪ್ರಾಯಗಳನ್ನು ತಗೆದುಕೊಂಡು ಸದಸ್ಯರಿಗೆ ಏನೇನು ಅನುಕೂಲತೆಗಳು ಬೇಕು ಅದನ್ನು ಮಾಡಿಸಿಕೊಡುವ ಬಗ್ಗೆ ಗಮನದಲ್ಲಿಟ್ಟುಕೊಂಡಿದ್ದೇನೆ, ಅದನ್ನು ಮಾಡಿಸಿಕೊಡುತ್ತೇನೆ.

೧೨-೩೦ ಪಿ. ಎಂ.

ಶ್ರೀ ಎಸ್. ಕೆ. ರಾಮಯ್ಯ.—ನಾನು ಸರ್ಕಾರವನ್ನು ದೂಷಿಸುತ್ತಿಲ್ಲ. ಸರ್ಕಾರ ನಡೆಸುವಂಥ ಸಂದರ್ಭದಲ್ಲಿ ೯ ಗಂಟೆಗೆ ಅದನ್ನು ತಂದುಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದಲ್ಲಿ ಕೆಲಸ ಮಾಡುವವರು ಮನುಷ್ಯರೇ ಇರುವುದರಿಂದ, ೯ ಗಂಟೆಗೆ ಕಳಿಸಿಕೊಂಡರೆ ಉತ್ತರಗಳು ಸಮಾಗೆ ಬರುವುದಿಲ್ಲ.

ಅಧ್ಯಕ್ಷರು.—ಮೊದಲೇ ತರಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಕೆ. ರಾಮಯ್ಯ.—ಸರ್ಕಾರದವರು ಇನ್ನೂ ಉತ್ತರ ಬಂದಿಲ್ಲ, ಇನ್ನು ಒಂದುಗಂಟೆ ಆದಮೇಲೆ ಕೊಡುತ್ತೇವೆ ಅಂದರೆ ನನ್ನ ಆಭ್ಯಂತರ ಇಲ್ಲ. ಈ ಗಳಿಗೆಯಲ್ಲಿ ಇಟ್ಟಿದ್ದೇನೆ ಎಂದೂ ಹೇಳಿಯೂ ಕೂಡ ಅದನ್ನು ಇಡದೆ ಇರುವ ಸಂದರ್ಭದಲ್ಲಿ ನೀವು ಪೆಲ್ಪ್‌ಫುಲ್ಸಾ. ಅದು ನನ್ನ ಪ್ರಶ್ನೆ. ಸರ್ಕಾರದವರು ತಂದುಕೊಡಬೇಕೆಂದು ಅಲ್ಲ. ವಿಧಾನಸಭಾ ಬಂದಿದೆ, ಕೊಡುವುದು ವಿಧಾನಸಭಾಗುತ್ತದೆ ಅಂದರೆ ಪರವಾಯಿಲ್ಲ. ನನ್ನ ಪ್ರಶ್ನೆ ಇಷ್ಟೆ. ಈ ಸದನದ ಮುಂದೆ ಉತ್ತರವನ್ನು ಇಟ್ಟಿದ್ದೇವೆಂದು ಹೇಳಿ. ಇಡದೇ ಹೋಗುವಂಥ ಸಂದರ್ಭದಲ್ಲಿ ನಾವು, ನೀವು ಇಬ್ಬರೂ ಅಸಹಾಯಕರೇ ಹೇಗೆ ?

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಲಿಖಿತ ಮೂಲಕ ಇಡಬೇಕಾದ ಪ್ರಶ್ನೆಗಳ ಪಟ್ಟಿಯ ಬಗ್ಗೆ ಪ್ರತಿದಿವಸ ನಾನು ಹೇಳುತ್ತಾ ಬಂದಿದ್ದೇನೆ. ನಾನು ಹೇಳಿದ್ದರೆ, ನನ್ನ ಸ್ನೇಹಿತರು ಹೇಳಿರುತ್ತಾರೆ. ಮಾನ್ಯ ರಾಮಯ್ಯನವರೆ ಸಭೆಯಲ್ಲಿ ಮುಂದಿಟ್ಟಿಲ್ಲ ಎಂದು ಹೇಳಿದ್ದಾರೆ. ಅಧ್ಯಕ್ಷರೆ, ಅದು ಯಾವುದು ಎಂದು ಹೇಳಿದರೆ ಅದರ ಬಗ್ಗೆ ನಾನು ತಪಾಸಣೆ ಮಾಡಿಸುತ್ತೇನೆ. ಅವರು ಯಾವುದು ಇಟ್ಟಿಲ್ಲ ಎಂದು ಹೇಳಬೇಕು. ಅವರು ನಿರ್ದಿಷ್ಟವಾಗಿ ಇಂತಹ ದಿವಸ ಇಂತಹ ಪಟ್ಟಿಯನ್ನು ಇಟ್ಟಿಲ್ಲ ಎಂದು ಹೇಳಿದರೆ ಅದನ್ನು ನಾವು ಸರಿಪಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇವೊತ್ತು ಬೆಳಿಗ್ಗೆ ೯ ಗಂಟೆಗೆ ತಮ್ಮ ಸೆಕ್ರೆಟರಿಯೇಟ್‌ಗೆ ಉತ್ತರಗಳನ್ನು ಕಳುಹಿಸಿದ್ದಾರೆಂದು ಹೇಳಿದರು. ೯ ಗಂಟೆಗೆ ಸೆಷನ್ ಇದ್ದರೆ ಸೈಕ್ಲೋಸ್ಟೈಲ್ ಮಾಡಿ ಯಾವಾಗ ಕಳುಹಿಸುತ್ತಾರೆ ಹೇಳಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸರಿಪಡಿಸುತ್ತೇವೆಂದು ಹೇಳಿದ್ದಾರೆ, ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಿ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

ವಿದ್ಯುತ್ ಕಡಿತ ಮತ್ತು ಲೋಡ್ ಶೆಡ್ಡಿಂಗ್‌ನಿಂದ ರೈತರು ನಷ್ಟ ಅನುಭವಿಸುತ್ತಿರುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಆಗಿಂದಾಗ್ಗೆ ವಿದ್ಯುತ್ ಕಡಿತ, ಕಡಿಮೆ ವಿದ್ಯುತ್ ಪ್ರಮಾಣ ಹಾಗೂ ವಿದ್ಯುತ್ ವಿಫಲತೆಯಿಂದಾಗಿ ಬೆಳೆಗಳಿಗೆ ಅಪಾರವಾದ ನಷ್ಟವುಂಟಾಗಿ ರೈತರು ಅನುಭವಿಸುತ್ತಿರುವ ತೊಂದರೆಯ ಬಗ್ಗೆ ಮಾನ್ಯ ವಿದ್ಯುತ್ ಮಂತ್ರಿಯವರ ಗಮನ ಸೆಳೆಯುತ್ತೇನೆ: —

ಶ್ರೀ ಲಕ್ಷ್ಮೀನರಸಿಂಹಯ್ಯ (ಮಾನ್ಯ ವಿದ್ಯುತ್ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ನನ್ನ ಎಲ್ಲ ಹೇಳಿಕೆಗಳೂ ಕನ್ನಡದಲ್ಲೇ ಇರುತ್ತವೆ. ಆದರೆ ಈ ಹೇಳಿಕೆ ಮಾತ್ರ ಇಂಗ್ಲೀಷ್‌ನಲ್ಲಿದೆ. ಅದ್ದರಿಂದ ಇದನ್ನೇ ಓದುತ್ತೇನೆ. ಅದು ಈ ರೀತಿ ಇದೆ —

> "In Karnataka there are about 3.75,000 I. P. Sets in all the Districts. Due to power break down very often, low voltage and load sheadding every day the agriculturists are losing crops to the extent of 100 Crores of Rupees. Though Power and Electricity Minister has promised to give Power continuously without break atleast for 18 hours, in day time atleast 12 hours the K. E. B. has failed to do so. This is a serious issue affecting the entire agriculturists throughout Karnataka. Hence we move this adjournment motion."

As on 28th February 1989 about 6,26,957 I. P. Sets have been unergised, in the State the target for sanctioning I. P. sets for 82-83 was 25,000, in 1983-84 it was 35,000, thereafter it was increased to 40,000 every year year which is being continued even now.